# ಕೀರ್ತನ ದಿಗ್ಗಜಗಳು



ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ
ಬೆಂಗಳೂರು

# ಕೀರ್ತನ ದಿಗ್ಗಜಗಳು

ನಿರೂಪಣೆ
ಭದ್ರಗಿರಿ ಸರ್ವೋತ್ತಮದಾಸರು



ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ
ಬೆಂಗಳೂರು

**KATHAKEERTANA. DIGGAJAGALU**
**Narration by Bhadragiri Sarvothama Dasaru**

No. 27, D.T Street, 8th Cross
Malleswaram, Bangalore - 560003

First Edition - 1998

Chief Editor :- S.N. Chandrashekhar

Editor :- H.N. Suresh

Published by :
Registrar, Sri H. Shankarappa
Karnataka Sangeeta Nritya Academy
14/3 Nrupatunga Road
Bangalore - 560002

Price : Rs 13/-

Printed at :

**Sree Ranga Printers & Binders**
Hanumanthanagar, Bangalore - 560019
Phone : 6679333

# ಮುನ್ನುಡಿ

ಕಥಾಕೀರ್ತನ, ಅಥವಾ ಹರಿ (ಶಿವ) ಕಥೆ ಒಂದು ವಿಶಿಷ್ಟವಾದ ಕಲೆ. ಚಿತ್ರಕಥೆಯನ್ನುಳಿದು ಮಿಕ್ಕೆಲ್ಲ ಲಲಿತಕಲೆಗಳೂ ಇದರಲ್ಲಿ ಸಮ್ಮಿಳನಗೊಳ್ಳುತ್ತವೆ. ಅನಕ್ಷರಸ್ಥರೇ ಹೆಚ್ಚಿರುವ ನಮ್ಮ ನಾಡಿನಲ್ಲಿ ಒಂದು ಸಮೂಹ ಮಾಧ್ಯಮವಾಗಿಯೂ ಇದರ ಕೊಡುಗೆ ಅಪಾರ. ಇತ್ತೀಚಿನವರೆಗೂ ಹಳ್ಳಿಗಳಷ್ಟೇ ಪಟ್ಟಣ.ಗಳಲ್ಲಿಯೂ ಈ ಕಲೆ ಜನಪ್ರಿಯವಾಗಿತ್ತು. ರಾಮನವಮಿ ಸಂದರ್ಭದಲ್ಲಿ ಹರಿಕಥಾ ಸಪ್ತಾಹಗಳೇ ಜರುಗುತ್ತಿದ್ದುವು. ಇದರ ಸ್ಥಾನವನ್ನು ಸಂಗೀತ ಆಕ್ರಮಿಸಿಕೊಂಡಿರುವುದಾದರೂ, ಕಥಾಕೀರ್ತನ ಕಲೆ ಇನ್ನೂ ಮೂಲೆಗುಂಪಾಗಿಲ್ಲ. ಇದನ್ನು ಜೀವಂತವಿಡುವ ಪ್ರಯತ್ನದಲ್ಲಿ ಆಕಾಶವಾಣಿಯ ಪಾತ್ರವೂ ಹಿರಿದು.

ಎರಡು ಮೂರು ತಲೆಮಾರುಗಳ ಹಿಂದೆ ಈ ಕಲೆಯನ್ನು ನಮ್ಮಲ್ಲಿ ಜನಪ್ರಿಯಗೊಳಿಸಿದವರಲ್ಲಿ ಪಂಡರಪುರದ ಸಂತರು ಮೊದಲಿಗರು. ಸಾಧಾರಣವಾಗಿ ಅವರೆಲ್ಲ ಕಾವಿಬಟ್ಟೆ, ತಲೆಗೆ ಅದೇ ವರ್ಣದ ಮುಂಡಾಸು, ಕಾಲಿಗೆ ಗೆಜ್ಜೆ, ಕೊರಳಲ್ಲಿ ತುಲಸೀ ಮಾಲೆಗಳಿಂದ ಅಲಂಕೃತರಾಗಿ, ಒಂದು ಕೈಯಲ್ಲಿ ಚಿಪ್ಳಾ (ತಾಳ), ಮತ್ತೊಂದರಲ್ಲಿ ಏಕನಾದವನ್ನು ಹಿಡಿದು, ಸುಶ್ರಾವ್ಯವಾಗಿ ಹಿಂದೀ, ಕನ್ನಡ, ಮರಾಠೀ ರಚನೆಗಳನ್ನು ಹಾಡುತ್ತಾ ತಾಳಕ್ಕೆ ತಕ್ಕಂತೆ ಹಗುರವಾಗಿ ಹೆಜ್ಜೆಗಳನ್ನು ಹಾಕುತ್ತಾ, ಕಥಾಭಾಗವನ್ನು ಹೃದಯಂಗಮ ವಾಗಿ ವಿವರಿಸುತ್ತಿದ್ದ ದೃಶ್ಯವನ್ನು ಕಂಡ ರಸಿಕರು ಮರೆಯಲಾಗದು. ಕಥಾಭಾಗವೆಲ್ಲಾ ''ಭಕ್ತ ವಿಜಯ''ದಿಂದ ಆರಿಸಲಾದುವು. ಉತ್ತರ ಕರ್ನಾಟಕದ ಶಿವಾಕಥಾ ಧುರೀಣರೂ ಆ ದಿನಗಳಲ್ಲಿ ಅಷ್ಟೇ ಜನಪ್ರಿಯರು. ಅವರಲ್ಲಿ ಕೀರ್ತನಕೇಸರಿ ಶಿವಮೂರ್ತಿ ಶಾಸ್ತ್ರಿಗಳ ಕಥೆಯನ್ನು ಕೇಳದವರೇ ವಿರಳ.

ನಮ್ಮ ಅಕಾಡೆಮಿ ಈಗಾಗಲೇ ಅಂತಹ ಇಬ್ಬರು (ಶ್ರೀ ಬೆಂಗಳೂರು ಕೃಷ್ಣ ಭಾಗವತರು ಮತ್ತು ಶ್ರೀ ವೇಣುಗೋಪಾಲ ದಾಸರು) ಹರಿಕಥಾ ವಿದ್ವಾಂಸರನ್ನು ಕುರಿತ ಪುಸ್ತಕಗಳನ್ನು ಪ್ರಕಟಿಸಿದೆ.

ಇದೀಗ ಆ ಕಲೆಯಲ್ಲಿ ಪರಿಣತರಾದವರನ್ನು ಈ ಕಿರುಪುಸ್ತಕದಲ್ಲಿ ಪರಿಚಯಿಸಲಾಗಿದೆ. ಹೀಗೆಯೇ ಶಿವಕಥಾ ವಿದ್ವಾಂಸರ ಪರಿಚಯವನ್ನೂ ಅಕಾಡೆಮಿ ಮಾಡಿಕೊಳ್ಳಲಿದೆ. ಇವೆಲ್ಲಾ ಓದುಗರ, ರಸಿಕರ ವಿಶ್ವಾಸಕ್ಕೆ ಈ ಕೊಡುಗೆ ಪಾತ್ರವಾಗುವುದೆಂದು ಆಶಿಸೋಣ.

— **ಶ್ಯಾಮಲಾ ಜಿ. ಭಾವೆ**
ಅಧ್ಯಕ್ಷರು
ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ

## ಎರಡು ಮಾತು

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷಿಣಿ ವಿದುಷಿ ಶ್ಯಾಮಲಾ ಜಿ. ಭಾವೆಯವರು ನನ್ನನ್ನು ಸಂಪರ್ಕಿಸಿ ಕರ್ನಾಟಕದ ಕೀರ್ತನ ಕಲೆಯ ಹಿರಿಯ ಚೇತನಗಳ ಪರಿಚಯವನ್ನು ಮಾಡಿಕೊಡುವ ಒಂದು ಕಿರುಹೊತ್ತಿಗೆಯನ್ನು ಬರೆದುಕೊಡಬೇಕೆಂದು ವಿನಂತಿಸಿದಾಗ ಅತ್ಯುತ್ಸಾಹದಿಂದಲೇ ಒಪ್ಪಿಕೊಂಡೆ. ಆದರೆ ಬರವಣಿಗೆಗೆ ಕೈಹಾಕಿದಾಗಲೇ ಅದರ ಕಷ್ಟ ಅರಿವಾದದ್ದು. ನನ್ನ ಅಣ್ಣಂದಿರಾದ ಸಂತ ಅಚ್ಯುತದಾಸರು, ಸಂತ ಕೇಶವದಾಸರ ವಿಷಯ ಬಿಟ್ಟರೆ ಉಳಿದ ಕೀರ್ತನಕಾರರ ಬಗ್ಗೆ ಮಾಹಿತಿ ದೊರೆಯುವುದು ದುರ್ಲಭವಾಗಿ ಬರವಣಿಗೆ ಕಾರ್ಯ ಕುಂಠಿತವಾಯಿತು ಅಕಾಡೆಮಿಯವರು ನಿಗದಿ ಪಡಿಸಿದ ವಾಯಿದೆಯೂ ಮುಗಿದಿತ್ತು. ಆದರೆ ಅಧ್ಯಕ್ಷರು ಮತ್ತಷ್ಟು ಸಮಯಾವಕಾಶ ನೀಡಿ ಕೆಲಸ ಪೂರ್ತಿ ಮಾಡಿಕೊಡುವಂತೆ ಕೋರಿದರು. ಅದರಂತೆ ನನ್ನಿಂದ ಸಾಧ್ಯವಾದಷ್ಟು ಮಟ್ಟಿಗೆ ಮಾಹಿತಿ ಸಂಗ್ರಹಿಸಿ ಕೆಲವೊಂದು ಕೀರ್ತನಕಾರರ ಪರಿಚಯ ಮಾಡಿಸುವ ಪ್ರಯತ್ನ ಮಾಡಿದ್ದೇನೆ. ಈ ದಿಸೆಯಲ್ಲಿ ನನ್ನ ಆತ್ಮೀಯರಾದ ಶ್ರೀ ಜಯರಾಮರಾಯರು ಹಾಗೂ ಕೀರ್ತನ ಕಲಾಬಂಧುಗಳು ಸಾಕಷ್ಟು ಸಹಕಾರ ನೀಡಿದ್ದಾರೆ. ಅವರಿಗೆಲ್ಲಾ ನನ್ನ ಧನ್ಯವಾದಗಳು. ಈ ಒಂದು ಸದವಕಾಶವನ್ನು ಕಲ್ಪಿಸಿ ನನ್ನಿಂದ ಒಂದು ಕಿಂಚಿತ್ ಸೇವೆ ನಡೆಯಲು ಅನುವು ಮಾಡಿಕೊಟ್ಟ ಅಕಾಡೆಮಿ ಅಧ್ಯಕ್ಷರಿಗೆ ನನ್ನ ಕೃತಜ್ಞತೆಗಳು. ಓದುಗರು ಕಲಾಭಿಮಾನಿಗಳು ಇದನ್ನು ಆದರದಿಂದ ಬರಮಾಡಿಕೊಂಡರೆ ನನ್ನ ಶ್ರಮ ಸಾರ್ಥಕ.

ಬೆಂಗಳೂರು
30. 12. 1997

ಇಂತು ಸಜ್ಜನ ವಿಧೇಯ,
**ಭದ್ರಗಿರಿ ಸರ್ವೋತ್ತಮದಾಸ್**

# ಸಂಬಂಧ ಮೂರ್ತಿ ಭಾಗವತರು

# ಹರಿಕಥಾವಿದ್ವಾನ್ ಸಂಬಂಧಮೂರ್ತಿ ಭಾಗವತರು

ಈಗ್ಗೆ ಸುಮಾರು ಐದು ದಶಕಗಳ ಹಿಂದೆ ಹರಿಕಥಾಕ್ಷೇತ್ರದಲ್ಲಿ ಸಾರ್ವಭೌಮರಾಗಿ ಮೆರೆದವರೆಂದರೆ ವಿದ್ವಾನ್ ಸಂಬಂಧಮೂರ್ತಿ ಭಾಗವತರು. ಸಂಬಂಧಮೂರ್ತಿಭಾಗವತರ್ ಎಂಬ ಹೆಸರು ಮಾತ್ರ ಉದ್ದ ವ್ಯಕ್ತಿ ಅಷ್ಟೇ ಕುಬ್ಜ. ಆದರೆ ಹರಿಕಥೆಗೆ ನಿಂತರೆ ತಾರಕ ಸ್ವರದಿಂದ ಹಾಡು ಆರಂಭಿಸಿದಾಗ ಆ ಕಂಠಶ್ರೀಯಿಂದ ಹೊಮ್ಮುವ ಸ್ವರ ಮುಗಿಲು ಮುಟ್ಟುತ್ತಿತ್ತು. ಮೂರ್ತಿ ಚಿಕ್ಕದಾದರೂ ಕೀರ್ತಿಮಾತ್ರ ಗೌರಿಶಂಕರದಷ್ಟು ಎತ್ತರ. ಸಂಸ್ಕೃತಭಾಷೆ, ಕನ್ನಡ, ತಮಿಳು, ತೆಲುಗು ಭಾಷೆಗಳಲ್ಲಿ ಬಹುಮುಖಿ ಪ್ರಭುತ್ವವನ್ನು ಹೊಂದಿದ್ದವರು ಭಾಗವತರು. ಕಥಾ ನಿರೂಪಣೆಗೆ ನಿಂತರೆ ಎಂಥವರನ್ನೂ ಮರುಳು ಮಾಡುವವಂಥಾದ್ದು. ಸಂಗೀತಪಾಠ ಚೆನ್ನಾಗಿ ಆಗಿದ್ದುದೇ ಅಲ್ಲದೆ ಸಂಗೀತ ಗ್ರಂಥಗಳ ಅಧ್ಯಯನ ಮಾಡಿ ಉತ್ತಮ ಸಂಗೀತ ವಿದ್ವಾಂಸರೂ ಆಗಿದ್ದವರು ಭಾಗವತರು. ಹಾಗಾಗಿ ಅವರ ಹಾಡುಗಾರಿಕೆಯಲ್ಲಿ ಲಯಖಚಿತತ್ವಕ್ಕೆ ಹೆಚ್ಚಿನ ಮಹತ್ವ. ಹಾಗಂತ ಸಾಹಿತ್ಯಲೋಪ ಎಂದೂ ಮಾಡಿದವರಲ್ಲ. ತಾವು ತಾಳ ಚಿಟಿಕೆ ಹಿಡಿದು ಲಯಬದ್ಧವಾಗಿ ಒಂದು ಕೃತಿಯನ್ನೋ, ದಾಸರಪದವನ್ನೋ ಹಾಡುತ್ತಿದ್ದಾಗ ಮೃದಂಗ ಅಥವಾ ತಬಲಾವಾದಕ ತಾಳ ತಪ್ಪಿದನೋ ಅಥವಾ ನಡೆಯನ್ನು ಎಳೆದಾಡಿದನೋ ಕೂಡಲೇ ಅವನ ಸಹಕಾರವನ್ನು ಬಹಿಷ್ಕರಿಸುವಷ್ಟು ಮುಂಗೋಪ ಅವರಲ್ಲಿತ್ತು. ಅಂದರೆ ಅವರ ಕಾರ್ಯಕ್ರಮದಲ್ಲಿ ಇಂಥ ಲೋಪದೋಷಗಳಿಗೆ ಎಂದೂ ಎಡೆಯಿರಬಾರದು. ಸಂಬಂಧಮೂರ್ತಿ ಭಾಗವತರ ಕಥೆಯೆಂದರೆ ಪಕ್ಕವಾದ್ಯದವರು ಅಳುಕಿನಿಂದಲೇ ವೇದಿಕೆ ಯೇರುತ್ತಿದ್ದರು. ಈ ವಿಚಾರ ಮೃದಂಗವಾದಕ ಎಂ.ಎಸ್. ರಾಮಯ್ಯನವರ ಬಾಯಿಂದ ಕೇಳಬೇಕು. ಸಿಟ್ಟಿನಿಂದ ತಾಳ-ಚಿಟಿಕೆಗಳನ್ನೇ ಅವರ ಮೇಲೆ ಎಸೆದುಬಿಡುತ್ತಿದ್ದರಂತೆ. ಅವರ ಕಥೆಗೆ ಕೂಡುತ್ತಿದ್ದ ಪಕ್ಕವಾದ್ಯದವರೂ ಸಾಮಾನ್ಯರೇನಲ್ಲ, ಆಯಾಕ್ಷೇತ್ರದ ಮಹಾಪ್ರಭೃತಿಗಳೇ. ವಿದ್ವಾನ್ ಅರುಣಾಚಲಪ್ಪ (ಹಾರ್ಮೋನಿಯಂ), ಹೆಚ್. ಪುಟ್ಟಾಚಾರ್ ಅಥವಾ ಎಂ. ಎಸ್. ರಾಮಯ್ಯ (ಮೃದಂಗ) ಮುಂತಾದವರ ಸಮ್ಮೇಳನದೊಂದಿಗೆ ಶಾಸ್ತ್ರೀಯ ಸಂಗೀತದ ಮಹಾಪೂರವೇ ಅಲ್ಲಿ ಹರಿಯುತ್ತಿತಂತೆ.

ತಮಿಳುನಾಡಿನ ಮಹಾನ್ ಕೀರ್ತನಕಾರ ಬಾಲಕಷ್ಣಶಾಸ್ತ್ರಿಗಳ್ ಕೇರಳದ ಕೃಪಾನಂದ ವಾರಿಯರ್ ಅವರುಗಳಂಥ ಪ್ರವಚನಕಾರರು ಸಂಬಂಧ ಮೂರ್ತಿಗಳ ಮುಂದೆ ಕಥೆಮಾಡಲು ಹೆದರುತ್ತಿದ್ದರಂತೆ. ಭಾಗವತರಲ್ಲಿದ್ದ ಕಥಾಪ್ರಸಂಗಗಳ ಸರಕು ಅದರಲ್ಲಿ ಅವರು ಬಳಸುತ್ತಿದ್ದ ದಾಸರಕೀರ್ತನೆಗಳ ಸಂಖ್ಯೆ ಅಪಾರ. ಕೆಲವೊಮ್ಮೆ ಯಾವ ಪೂರ್ವಸಿದ್ಧತೆಯೂ ಇಲ್ಲದೆ ವೇದಿಕೆಗೆ ಬಂದು ಸಭಿಕರನ್ನೇ ಕೇಳುತ್ತಿದ್ದರಂತೆ. ಇಂದು ಯಾವ ಕಥೆ ಮಾಡಬೇಕು ಎಂದು, ಅದರಂತೆ ಕಥೆ ಮಾಡುತ್ತಿದ್ದರಂತೆ.

ಇನ್ನು ಕಥಾಸಂದರ್ಭದಲ್ಲಿ ಅವರು ನೀಡುತ್ತಿದ್ದ ಕೆಲವು ವರ್ಣನೆಗಳಂತೂ ಅವರ್ಣನೀಯ. ಅದರಲ್ಲೂ ದಶಾವತಾರದ ವರ್ಣನೆ ಬಂತೆಂದರೆ ತಮ್ಮನ್ನೇ ಮರೆಯುತ್ತಿದ್ದರು. ಒಮ್ಮೆ ಮಲ್ಲೇಶ್ವರದ ಶ್ರೀರಾಮಮಂದಿರದಲ್ಲಿ ಇವರ ಕಥೆ ನಡೆಯುತ್ತಿತ್ತು. ಅಲ್ಲಿ ಪರಮಾತ್ಮನ ಮಹಿಮೆಯನ್ನು ತಿಳಿಸುತ್ತಾ ದಾಸಕೃತಿಯೊಂದನ್ನು, ಅದರಲ್ಲೂ ದಶಾವತಾರವನ್ನು ವರ್ಣಿಸುವ ನಿಂದಾಸುತ್ತಿಯೊಂದನ್ನು ಹಾಡಲು ಮೊದಲಿಟ್ಟರು. ಪುಂಖಾನು ಪುಂಖವಾಗಿ ಹೊರಟಿತು ಸಾಹಿತ್ಯ ಮೋಹನರಾಗದಲ್ಲಿ.

**ಬಿಡೆ ನಿನ್ನ ಪಾದವ ಬಿಂಕವಿನ್ಯಾಕೋ**
**ಕೊಡುವ ಮನೋಭೀಷ್ಠವ ಕೋಪವಿದೇಕೋ ॥**
**ನೀರೊಳು ಪೊಕ್ಕರು ನಿನ್ನನ್ನು ನಾಬಿಡೆ**
**ಭಾರವತಳೆದಿಹೆಯೆಂದರೂ ಬಿಡೆನು**
**ಕೋರೆಯ ತೋರಿಸಿ ಕೊಸರಿಕೊಂಡರು ಬಿಡೆ**
**ಘೋರರೂಪವ ತಾಳಿ ಘುಡು ಘುಡಿಸಿದರೂ ಬಿಡೆ ॥**

ಹೀಗೆ ಸಾಗಿತು ಕೀರ್ತನೆ. ಇಲ್ಲಿ ಒಗಟಿನ ರೂಪದಲ್ಲಿ ಹರಿಯ ಅವತಾರದ ವರ್ಣನೆ! ನೀರೊಳು ಪೊಕ್ಕರು ಎಂದಾಗ ಆ ಮತ್ಸ್ಯಾವತಾರ, ಭಾರವ ತಳದಿಹೆ ಎನ್ನುವಾಗ ಆಮೆಯ ನಡಿಗೆ, ಕೋರೆಯ ತೋರಿಸಿ ಎನ್ನುವಾಗಿನ ಹಂದಿಯ ಗುಟುರು, ಘೋರ ರೂಪದ (ನರಸಿಂಹನ) ಸಿಂಹ ಘರ್ಜನೆ ತಿರುಕನೆನ್ನುವಾಗಿನ (ವಾಮನ) ಸೌಮ್ಯಭಾವ, ತಾಯಕೊರಳ ತರಿದು ಎಂದಾಗಿನ ಪರಶುರಾಮನ ಚಿತ್ರ, ಪೊರೆಯ ಪಿತನ ಮಾತಿಗೆ ರಾಮನ ಸೌಂದರ್ಯ, ಗರಳ ಮಡುವಿನಲ್ಲಿ ಧುಮುಕಿದ ಕೃಷ್ಣನ ವರ್ಣನೆ ಹೀಗೆ. ಅದೇನು ಹಾವಭಾವ ಆ ಸಮಸ್ತ ಅವತಾರಗಳ ಚಿತ್ರಗಳು ಪ್ರೇಕ್ಷಕರ ಕಣ್ಣು ಮುಂದೆ ನಿಲ್ಲುವಂತೆ ಮೋಡಿಮಾಡುವ ಚಾಕಚಕ್ಯತೆ ಅವರಲ್ಲಿ ಮನೆಮಾಡಿತ್ತು. ಅದೇ ಅವರ ಯಶಸ್ಸಿನ ಗುಟ್ಟಾಗಿತ್ತು.

ಅಷ್ಟೇ ಅಲ್ಲದೆ ಸುಮ್ಮನೆ ಮನಸ್ಸಿಗೆ ಬಂದ ರೀತಿಯಲ್ಲಿ ಕಥೆ ಮಾಡುತ್ತಿದ್ದವರಲ್ಲ ಭಾಗವತರು. ಅದಕ್ಕೂ ಒಂದು ಶಿಸ್ತು ಸಂಪ್ರದಾಯಗಳನ್ನು ಬೆಳೆಸಿಕೊಂಡಿದ್ದವರು. ನಿರೂಪಣೆಯಲ್ಲಿನ ಕಟ್ಟುನಿಟ್ಟು, ಅವಸರವಿಲ್ಲದ ಮಂದಗತಿಯ ವಿಸ್ತಾರವಾದ ಪ್ರಸ್ತಾವನೆ. ಜನ ಕೇಳಲಿ ಬಿಡಲಿ ಈ ಸಂಪ್ರದಾಯವನ್ನು ಎಂದೂ ಮುರಿದವರಲ್ಲ. ಕೆಲವೊಂದು ಕಡೆ ಸಂದರ್ಭಕ್ಕೆ

ತಕ್ಕಂತೆ ನೆರವಲ್ ಕಲ್ಪನಾ ಸ್ವರಗಳೊಂದಿಗೆ ಕೃತಿಗಳನ್ನು ಹಾಡಿ ಪಕ್ಕವಾದ್ಯ ದವರಿಗೂ ಸಾಕಷ್ಟು ಕೆಲಸ ಕೊಡುತ್ತಿದ್ದರು. ಅವಸರದ ಕಾರ್ಯಕ್ರಮಗಳಿಗೆ ಎಂದೂ ಸೊಪ್ಪು ಹಾಕಿದವರಲ್ಲ. ಜನ ಕೇಳಬೇಕೆಂದು ಕಥೆ ಮಾಡಿದವರಲ್ಲ. ಭಗವತ್ಕೈಂಕರ್ಯ ಎಂದು ನಂಬಿದವರು. ಇವರ ಸಂಗೀತ ಅಷ್ಟು ಖಚಿತ ವಾಗಿರಬೇಕಾದರೆ ಉತ್ತಮ ವಿದ್ವಾಂಸರಿಂದಲೇ ಇವರಿಗೆ ಸಂಗೀತ ಪಾಠ ವಾಗಿರಬೇಕು. ಬಹುಷಃ ಇವರು ಹರಿಕೇಶನಲ್ಲೂರ್ ಮುತ್ತಯ್ಯಭಾಗವತರ ಶಿಷ್ಯರು ಎಂದು ತಿಳಿದು ಬರುತ್ತದೆ. ಆದರೆ ಖಚಿತವಾಗಿ ಹೇಳುವಂತಿಲ್ಲ. ಮುತ್ತಯ್ಯ ಭಾಗವತರ ಹರಿಕಥಾ ನಿರೂಪಣಾಶೈಲಿ, ಹಾಡಿಕೆಯಲ್ಲಿನ ಕೌಶಲ್ಯ ಇವರಲ್ಲಿ ಕಾಣಬಹುದಾಗಿತ್ತು.

ಸಂಬಂಧಮೂರ್ತಿಭಾಗವತರ ಶಿಷ್ಯಸಂಪತ್ತಿನ ಬಗ್ಗೆ ಹೆಚ್ಚು ತಿಳಿಯ ದಾದರೂ ಚಿತ್ರಬ್ರಹ್ಮ-ನಟ-ಗಾಯಕ ಸಿ. ಹೊನ್ನಪ್ಪ ಭಾಗವತರ್ ಇವರ ಪ್ರಮುಖ ಶಿಷ್ಯರಲ್ಲೊಬ್ಬರು. ಇವರ ಕಾರ್ಯಕ್ರಮಗಳಲ್ಲಿ ಹೊನ್ನಪ್ಪ ಭಾಗವತರ್ ಕೂಡ ಸಹಗಾಯಕರಾಗಿ ಪಾಲ್ಗೊಳ್ಳುತ್ತಿದ್ದರು. ಮೊದಲು ಕೇವಲ ಹೊನ್ನಪ್ಪನಾಗಿದ್ದ ಇವರು ಸಂಬಂಧಮೂರ್ತಿ ಭಾಗವತರ ಶಿಷ್ಯರಾದ ಮೇಲೆ ತಮ್ಮ ಹೆಸರಿನ ಜೊತೆ ಭಾಗವತರ್ ಎಂದು ಸೇರಿಸಿಕೊಂಡು ಹೊನ್ನಪ್ಪ ಭಾಗವತರಾದರು ಎಂದು ಅವರೇ ಹೇಳಿದ್ದ ನೆನಪು. ಕೇವಲ ಕರ್ನಾಟಕ ಮಾತ್ರವಲ್ಲದೆ ತಮಿಳುನಾಡಿನಲ್ಲೂ ಭಾಗವತರ ಕಥೆ ಅತ್ಯಂತ ಜನಪ್ರಿಯ ವಾಗಿದ್ದು ಕೆಲವೊಂದು ತಮಿಳು ಚಿತ್ರಗಳಲ್ಲೂ ನಟರಾಗಿ ಕಾಣಿಸಿ ಕೊಂಡಿದ್ದಾರೆ. ಅಲ್ಲಿನ ಗಾಯಕ ನಟರೆನಿಸಿದ್ದ ತ್ಯಾಗರಾಜ ಭಾಗವತರ್, ಕೆ.ಬಿ ಸುಂದರಾಂಬಾಳ್, ಎಸ್. ಜಿ. ಕಿಟ್ಟಪ್ಪ, ಟಿ. ಆರ್. ಮಹಾಲಿಂಗಮ್ ಭಾಗವತರ ಗಾಯನದ ಮೋಡಿಗೆ ಸಿಲುಕಿ ಪ್ರಭಾವಿತರಾದವರು. ಇವರ ಶಿಷ್ಯರಾದ ಹೊನ್ನಪ್ಪ ಭಾಗವತರೂ ತಮಿಳು ಚಿತ್ರರಂಗ ಪ್ರವೇಶಿಸಲು ಸಂಬಂಧಮೂರ್ತಿಭಾಗವತರ ಪ್ರಭಾವವೇ ಕಾರಣ.

ಅಲ್ಲದೆ ಹೊನ್ನಪ್ಪಭಾಗವತರು ತಯಾರಿಸಿದ "ಮಹಾಕವಿ ಕಾಳಿದಾಸ" ಚಿತ್ರದಲ್ಲಿ ಸಂಬಂಧಮೂರ್ತಿಗಳು ಗುರುಗಳ ಪಾತ್ರದಲ್ಲಿ ಕಾಣಿಸಿ ಕೊಂಡಿದ್ದಾರೆ. ಸಂಬಂಧಮೂರ್ತಿ ಭಾಗವತರ ಪ್ರತಿಭೆ-ಪಾಂಡಿತ್ಯವನ್ನು ಗುರುತಿಸಿದ ನಗರದ ಪ್ರತಿಷ್ಠಿತ ಸಂಗೀತ ಸಂಸ್ಥೆ ಮಲ್ಲೇಶ್ವರಂ ಸಂಗೀತ ಸಭಾದವರು ಅವರಿಗೆ ಶಾಲು ಹೊದಿಸಿ ಫಲತಾಂಬೂಲದೊಂದಿಗೆ ಗೌರವಿಸಿ ಸತ್ಕರಿಸಿದ್ದಾರೆ.

ಸರಳ ಜೀವಿಯಾಗಿ ಯಾವ ಪ್ರತಿಫಲಾಪೇಕ್ಷೆಗೂ ಸಿಲುಕದೆ, ಭಗವಂತನ ಸೇವೆಯೇ ತಮ್ಮ ಕಲಾಜೀವನದ ಗುರಿ ಎಂದು ಭಾವಿಸಿ ದೊರೆತಷ್ಟಕ್ಕೆ ತೃಪ್ತಿಹೊಂದುವಂಥ ಶ್ರೀಮಂತ ಮನಸ್ಸಿನ ಹಿರಿಯ ಜೀವ ಭಾಗವತರು. ಅವರನ್ನು ಪಡೆದ ಕನ್ನಡತಾಯಿ ಭುವನೇಶ್ವರಿ ಧನ್ಯೆ.

---



# ಕಲಾಕ್ಷೇತ್ರದ ತಪಸ್ವಿ
# ಟಿ. ವಿ. ಗೋಪೀನಾಥದಾಸರು

''ಕಲಾಚಂದ್ರಿಕಾ'' - ವಿಶ್ವೇಶ್ವರಪುರದ ಒಂದು ಕಲಾತಪೋವನ. ಇಲ್ಲಿ ನಡೆಯುತ್ತಿದ್ದುದು ಕಲೆ, ಸಂಸ್ಕೃತಿ ಹಾಗೂ ರಂಗಭೂಮಿಯ ಸೇವಾಕಾರ್ಯಗಳು. ಈ ಎಲ್ಲ ಕಲಾರಾಧನೆಯ ಮಹಾತಪಸ್ವಿ ಆಚಾರ್ಯ ಟಿ. ವಿ. ಗೋಪೀನಾಥದಾಸರು, ಆತ್ಮೀಯರಿಗೆಲ್ಲ ಗೋಪಣ್ಣ! ಹಾಗಾದರೆ ಯಾರೀ ಗೋಪಣ್ಣ?

ದಾಸಚತುಷ್ಟಯರಲ್ಲಿ ಎರಡನೇಯವರು ವಿಜಯದಾಸರು-ಈ ವಿಜಯದಾಸರ ಸಾಕುಮಗ ಮೋಹನ ದಾಸರ ಪರಂಪರೆಯಲ್ಲೇ ಬಂದವರು ಮೂರ್ತಾಚಾರ್ಯರು. ಈ ಮೂರ್ತಾಚಾರ್ಯರ ಹಿರಿಯ ಮಗ ವೆಂಕಣ್ಣದಾಸರು. ಅಲ್ಲದೆ ಹರಿಕಥಾಂಬುದಿ ಚಂದ್ರ ವೇಣುಗೋಪಾಲ ದಾಸರಾದಿಯಾಗಿ ಇತರ ನಾಲ್ವರು ಪುತ್ರರು. ವೆಂಕಣ್ಣದಾಸರ ದ್ವಿತೀಯ ಪುತ್ರನೇ ಈ ಗೋಪಣ್ಣ ಉರುಫ್ ಗೋಪೀನಾಥದಾಸರು. ಇವರದು ದಾಸಪರಂಪರೆ ಮನೆತನ.

## ಜನನ-ಬಾಲ್ಯ

'ಭರಣಿ ನಕ್ಷತ್ರದಲ್ಲಿ ಹುಟ್ಟಿದ್ದವನು ಧರಣಿ ಆಳ್ತಾನೆ' ಎಂಬುದು ಒಂದು ಗಾದೆ ಮಾತು. ಆನಂದನಾಮ ಸಂವತ್ಸರ ಜೇಷ್ಠ ಬಹುಳ ದ್ವಾದಶಿ (೨೦-೬-೧೯೧೪)ಯಂದು ಶುಭಪ್ರದವಾದ ಭರಣಿ ನಕ್ಷತ್ರದಲ್ಲಿ- ವೆಂಕಣ್ಣದಾಸರ ದ್ವಿತೀಯಪುತ್ರನಾಗಿ ಗೋಪಣ್ಣನ ಜನನ. ಇವರಿಗಿಂತ ಹಿರಿಯರು ಕರಿಗಿರಿ ಆಚಾರ್ - ಪ್ರಸಿದ್ಧ ಹಾರ್ಮೋನಿಯಂ ಹಾಗೂ ಸೋಲೊವಾಕ್ಸ್ ವಾದಕರು. ವ್ಯಾಸರಾಜ ಮಠಾಧೀಶರಾಗಿದ್ದ ಶ್ರೀ ಶ್ರೀ ವಿದ್ಯಾಪಯೋನಿಧಿ ತೀರ್ಥ ಶ್ರೀಪಾದಂಗಳರಿಂದ ಅನುಗ್ರಹೀತರಾಗಿ 'ನಾದಗಂಧರ್ವ' ಎಂಬ ಬಿರುದಿಗೆ ಪಾತ್ರರಾದವರು.

ಭರಣಿ ನಕ್ಷತ್ರದಲ್ಲಿ ಹುಟ್ಟಿದ ಗೋಪಣ್ಣ ಗಾದೆ ಮಾತಿನಂತೆ ಧರಣಿ ಆಳಿದನೋ ಬಿಟ್ಟನೋ ಅದು ನಮಗೆ ಬೇಕಿಲ್ಲ. ಆದರೆ ಕಲಾಸಾಮ್ರಾಜ್ಯದ

ಅನಭಿಷಿಕ್ತ ಸಾಮ್ರಾಟನಾಗಿ ಮಾತ್ರ ಮೆರೆದವರು. ಅಲ್ಲದೆ ಆಗಿನ ಕಾಲಕ್ಕೆ ರಾಜಮನೆತನದ ಮಕ್ಕಳ ಒಡನಾಡಿಗಳಾಗಿ ಇರಲು ಸುಸಂಸ್ಕೃತ ಮನೆತನದ ಮಕ್ಕಳನ್ನು ಆಯ್ಕೆಮಾಡುತ್ತಿದ್ದರಂತೆ. ಹಾಗೆ ಮೈಸೂರಿನ ಅರಸರಾಗಿದ್ದ ಶ್ರೀಜಯಚಾಮರಾಜರ ಜೊತೆ ಓದಲು ಈ ಗೋಪಣ್ಣ ಸಹ ಆಯ್ಕೆ ಯಾಗಿದ್ದರಂತೆ. ಆದರೆ ಹಿರಿಯರು ಮಗನನ್ನು ದೂರದ ಮೈಸೂರಿಗೆ ಕಳುಹಿಸಲು ಒಪ್ಪಲಿಲ್ಲ ಧರಣಿ ಆಳುವವರ ಕೃಪಾದೃಷ್ಟಿ ಇವರ ಮೇಲೆ ಬಿದ್ದಿದ್ದೇ ಇವರಿಗೆ ತೃಪ್ತಿ.

ಇವರ ನಂತರ ಹುಟ್ಟಿದವರೇ ಟಿ. ವಿ. ಜಯಸಿಂಹದಾಸರು ಹಾಗೂ ಟಿ. ವಿ. ದ್ವಾರಕಾನಾಥ ಹಾಲಿಪ್ರಭಾತ್ ಸಂಸ್ಥೆಯ ನಿರ್ದೇಶಕರು. ಇವರೆಲ್ಲರೂ ಹುಟ್ಟಿದ್ದು ಸಹ ಭಗವಂತನ ವರಪ್ರಸಾದದಿಂದಲೇ.

ವೆಂಕಣ್ಣದಾಸರು ಮತ್ತು ಭಾಗೀರಥಮ್ಮನವರಿಗೆ ವಿವಾಹವಾಗಿ ಹಲವು ವರ್ಷಗಳೇ ಸಂದಿದ್ದರೂ ಸಂತಾನ ಭಾಗ್ಯ ಒದಗಿ ಬಂದಿರಲಿಲ್ಲ. ಈ ಮಧ್ಯೆ ಭಾಗೀರಥೀ ಬಾಯಿಯವರಿಗೆ ಕ್ಷಯರೋಗ ಕಾಣಿಸಿಕೊಂಡು ಅವರು ಬದುಕುವುದೇ ದುರ್ಭರವಾದಾಗ ಮುಳಬಾಗಿಲಿನ ಶ್ರೀಪಾದರಾಜರ ಸನ್ನಿಧಿ ಯಲ್ಲಿ ಸೇವಾಕೈಂಕರ್ಯ ಆರಂಭಿಸಿದರಂತೆ. ಸ್ವಪ್ನದರ್ಶನ ನೀಡಿದ ಶ್ರೀಗಳು ಮುಳಬಾಗಿಲಿನ ಶ್ರೀಸೋಮೇಶ್ವರನನ್ನು ಆರಾಧಿಸುವಂತೆ ನಿರ್ದೇಶಿಸಿದರಂತೆ. ಹಾಗೆಯೇ ಈ ದಂಪತಿಗಳು ಸೋಮೇಶ್ವರನನ್ನು ಆರಾಧಿಸಿ ಅವನ ಅನುಗ್ರಹ ದಿಂದ ಭಾಗೀರಥಮ್ಮನ ಕ್ಷಯರೋಗ ಕ್ಷಯಿಸಿ ಸಂತಾನ ಭಾಗ್ಯವುಂಟಾಗಿ ನಾಲ್ಕು ಮಕ್ಕಳ ತಾಯಿಯಾದರಂತೆ.

ವೆಂಕಣ್ಣದಾಸರ ಮನೆತನ ಅತ್ಯಂತ ಸಂಪ್ರದಾಯನಿಷ್ಠ ವಂಶ. ಆದರೆ ವೆಂಕಣ್ಣದಾಸರು ಅನುವಂಶೀಕವಾಗಿ ಬಂದ ದಾಸಪಂಥವನ್ನು ಹಿಡಿದು ಹರಿಕಥಾ ವಿದ್ವಾಂಸರಾದರೂ ನಾಟಕ, ಸಿನಿಮಾಗಳ ಗೀಳು ಇವರಿಗೆ ಹತ್ತಿತ್ತು. ಅದೇ ಸಂಸ್ಕಾರ ಗೋಪಣ್ಣನಿಗೂ ಸಹ. ಮೈಸೂರಿನ ವೀಣೆ ಶೇಷಣ್ಣನವರ ನೇರ ಶಿಷ್ಯರಾಗಿದ್ದ ಲಕ್ಷ್ಮೀನಾರಯಣ್ಣಪ್ಪನವರ ಮಗ ಎಲ್. ರಾಜಾರಾವ್ ಅಂದಿನ ಪ್ರಸಿದ್ಧವೈಣಿಕ. ಅವರ ಬಳಿ ಗೋಪಣ್ಣನಿಗೆ ವೀಣೆ ಹಾಗೂ ಬಾಯಿ ಹಾಡುಗಾರಿಕೆ ಪಾಠ. ಅವರ ಪಾಠ ಅತ್ಯಂತ ಕಟ್ಟುನಿಟ್ಟು. ಹೀಗಾಗಿ ಗೋಪೀನಾಥ ರಾಜಾರಾಯರ ಪಾಠಕ್ರಮದಿಂದ ಆಗಿನ ಮೆಸೂರು ಪ್ರಾಂತದ ಸಂಗೀತ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾದ.

ಆಗಿನ ಕಾಲಕ್ಕೆ ಇವರ ಮನೆತನದ ಕೀರ್ತಿಯೆಂದರೆ ಹರಿಕಥೆಗೆ ವೆಂಕಣ್ಣದಾಸರು, ನಾಟಕಕ್ಕೆ ವರದಾಚಾರ್ಯರು, ಸಂಗೀತಕ್ಕೆ ವಾಸುದೇವಾ ಚಾರ್ಯರು ಎಂದು ಮನೆಮಾತಾಗಿತ್ತು. ವಾಸುದೇವಾಚಾರ್ಯರು, ರಾಜಾರಾಯರೂ ಹೆಚ್ಚುಕಮ್ಮಿ ಸಮಕಾಲೀನರು. ವರದಾಚಾರ್ಯರೂ ಸಹ.

ವರದಾಚಾರ್ಯರ ಗರಡಿಯಲ್ಲೇ ಗೋಪಣ್ಣ ನಾಟಕದ ಗೀಳು ಹತ್ತಿಸಿಕೊಂಡ. ಈಗಾಗಲೇ ಬಾಲ ಪಾತ್ರಗಳಲ್ಲಿ ಹಲವಾರು ಬಾರಿ ರಂಗಭೂಮಿಯಮೇಲೆ ಕಾಣಿಸಿಕೊಂಡಿದ್ದ. ನೋಡುವುದಕ್ಕೆ ಅತ್ಯಂತ ಲಕ್ಷಣವಾದ ಹುಡುಗ. ಮಾಧ್ವ ಸಂಪ್ರದಾಯದ ಚಿಹ್ನೆಗಳಿಂದ ಕಂಗೊಳಿಸುತ್ತಿದ್ದ.

ಹುಡುಗ ರಂಗ ವೇದಿಕೆಗೆ ಬಾಲನಟನಾಗಿ ಹತ್ತಿದ್ದೂ ಒಂದು ಪವಾಡವೇ. ೧೯೨೨ರ ಒಂದು ರಾತ್ರಿ. ಆಗ ಈ ಗೋಪಣ್ಣಗೆ ಎಂಟುವರ್ಷ. ಮಲಗಿದ್ದ ಹುಡುಗನನ್ನು ಯಾರೋ ಮನೆಯಿಂದ ಎತ್ತಿಕೊಂಡು ಹೋದರು. ಬ್ಯಾಂಡಿನ ಶಬ್ದದಿಂದ ಹುಡುಗನಿಗೆ ಎಚ್ಚರವಾದರೂ ತಾನೆಲ್ಲಿದ್ದೇನೆಂದು ತಿಳಿಯಲಿಲ್ಲ. ಆದರೆ ನಾಟಕದ ಪರದೆ, ಧಗಧಗಿಸುತ್ತಿದ್ದ ಪೆಟ್ರೋಮ್ಯಾಕ್ಸ್ ದೀಪಗಳು ಓಡಾಟದ ಜನವನ್ನು ನೋಡಿ ಇದೊಂದು ನಾಟಕ ನಡೆಯುವ ಜಾಗವಿರಬಹುದೆಂಬ ಆಲೋಚನೆ ಹುಡುಗನಲ್ಲಿ ಬಂತು. ಅದು ತುಳಸೀ ನಾಟಕ ಸಂಸ್ಥೆ. ಅಂದಿನ ನಾಟಕ ಭಕ್ತಧೃವ. ಅಲ್ಲಿ ಉತ್ತಮನ ಪಾತ್ರಧಾರಿಗೆ ದೇಹಾಲಸ್ಯವಾಗಿ ಅವನು ಬರಲಾಗದಿದ್ದುದಕ್ಕೆ ಈ ಹುಡುಗನನ್ನು ಕರೆತಂದು ಮೇಕಪ್ ಮಾಡಿಸಿಯೇಬಿಟ್ಟರು, ಹುಡುಗನೂ ಯಾವ ಅಳುಕೂ ಇಲ್ಲದೆ ಅವರು ಹೇಳಿಕೊಟ್ಟ ಮಾತುಗಳನ್ನು ನಿರೂಪಿಸಿದ. ಮುಂದೆ ಆ ಕಂಪೆನಿಯ ಬಾಲಪಾತ್ರಗಳೆಲ್ಲ ಗೋಪಣ್ಣನಿಗೇ ಮೀಸಲಾಯಿತು.

ಜೊತೆ ಜೊತೆಯಲ್ಲಿಯೇ ತಂದೆಯಿಂದ ಹರಿಕಥಾಶಿಕ್ಷಣವೂ ದೊರೆತು ಅದರಲ್ಲಿ ನಿಷ್ಣಾತರಾಗಿ ತಮ್ಮ ಪ್ರೌಢವಿದ್ಯಾಭ್ಯಾಸ ಮುಗಿಯುವ ವೇಳೆಗೆ ಕಲಾರಂಗದಲ್ಲಿ ಕಡೆದ ಸುಂದರ ವಿಗ್ರಹವಾದರು ಗೋಪಣ್ಣ. ಅಷ್ಟೇಅಲ್ಲ ಚಲನಚಿತ್ರರಂಗಕ್ಕೂ ಪದಾರ್ಪಣ ಮಾಡಿ ಅನೇಕ ಮೂಕಿ ಚಿತ್ರಗಳಲ್ಲಿ ಕಾಣಿಸಿಕೊಂಡರು.

ಈ ಹೊತ್ತಿಗೆ ಸಂಗೀತಜ್ಞಾನ ಚೆನ್ನಾಗಿದ್ದ ಗೋಪಣ್ಣಗೆ ಬೆಂಗಳೂರಿನ ಸುಲ್ತಾನ್ ಪೇಟೆಯ ಆರ್ಯಬಾಲಿಕಾ ಪಾಠಶಾಲೆಯಲ್ಲಿ ಸಂಗೀತದ ಅಧ್ಯಾಪಕನಾಗಿ ಕೆಲಸ ದೊರೆಯಿತು. ಆಗ ಗೋಪಣ್ಣನಿಗೆ ಕೇವಲ ಹತ್ತೊಂಬತ್ತು ವರ್ಷ. ಆಗ ಆ ಆಶಾಲೆಯಲ್ಲಿ ಓದುತ್ತಿದ್ದ ಪ್ರಖ್ಯಾತ ಚಿತ್ರತಾರೆ ಎಂ. ವಿ. ರಾಜಮ್ಮ ಗೋಪಣ್ಣನ ವಿದ್ಯಾರ್ಥಿನಿ.

ಆದಾದ ಕೆಲವು ಸಮಯದ ನಂತರ ಇವರಿಗೆ ಮಲ್ಲೇಶ್ವರದ ಮಾಧ್ಯಮಿಕ ಬಾಲಿಕ ಶಾಲೆಗೆ ವರ್ಗವಾಗಿ ಅಲ್ಲಿಯೂ ಸಂಗೀತ ವಿಭಾಗದಲ್ಲಿ ಅನೇಕ ಸುಧಾರಣೆಗಳನ್ನು ತಂದರು. ಇದೇ ಸಂದರ್ಭದಲ್ಲಿ ನಾಟಕದ ಗೀಳು ಹತ್ತಿಸಿಕೊಂಡು ಶಾಲೆ ತಪ್ಪಿಸಿ ಓಡಾಡುತ್ತಿದ್ದ ನಾಟಕದ ಹಿರಣ್ಣಯ್ಯ ಇವರ ಗೆಳೆಯರಾದರು. ಕರಿಗಿರಿ-ಗೋಪಣ್ಣ-ಹಿರಣ್ಣಯ್ಯ ಸುತ್ತುಮುತ್ತಲಿನ ತುಂಟ ಹುಡುಗರಾದರು.

## ಆಕಾಶವಾಣಿಯ ಪ್ರಥಮ ಕಾರ್ಯಕ್ರಮ

ಆಕಾಶವಾಣಿ ಪ್ರಸಾರ ಭಾರತಕ್ಕೆ ಪ್ರವೇಶಿಸಿದ ಸಂದರ್ಭ. ಬೆಂಗಳೂರಿನ ಟಾಟಾ ವಿಜ್ಞಾನ ಸಂಸ್ಥೆಯ ಮೂಲಕ ಬೆಂಗಳೂರು ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಪ್ರಸಾರ ವ್ಯವಸ್ಥೆ ಮಾಡಲಾಗಿತ್ತು. ಸರ್. ಸಿ. ವಿ. ರಾಮನ್‌ರವರ ನೇತೃತ್ವದಲ್ಲಿ ಇದರ ಪ್ರಾರಂಭೋತ್ಸವ. ಅಂದು ಅನೇಕ ಗಣ್ಯರೆದುರಿಗೆ ತಮ್ಮ ಗುರುಗಳಾದ ರಾಜಾರಾಯರೊಂದಿಗೆ ವೀಣೆ ನುಡಿಸುವ ಸದವಕಾಶ ಈ ಗೋಪಣ್ಣನಿಗೆ! ಹೀಗೆ ಆಕಾಶವಾಣಿಯಲ್ಲಿ ವೀಣೆ ನುಡಿಸಿದ ಪ್ರಥಮ ಯುವಕಲಾವಿದ.

## ಹರಿಕಥಾರಂಗಕ್ಕೆ

ತಂದೆ ವೆಂಕಣ್ಣದಾಸರು ಇರುವಷ್ಟು ಕಾಲ ಮಕ್ಕಳು ಹರಿಕಥಾಕಲೆಯನ್ನು ಕರಗತಮಾಡಿಕೊಂಡಿದ್ದರೂ ವೇದಿಕೆ ಹತ್ತಿರಲಿಲ್ಲ. ನಾಟಕ-ಸಂಗೀತಗಳಲ್ಲೇ ಕಾಲತಳ್ಳುತ್ತಿದ್ದರು. ೧೯೩೫ರಲ್ಲಿ ತಂದೆ ವೆಂಕಣ್ಣದಾಸರು ಕಾಲವಾಗಿ ಅವರ ಹತ್ತು ದಿನದ ಕರ್ಮಾಂತರಗಳು ಮುಗಿದಿತ್ತು. ಅಂದೇ ರಾತ್ರಿ ಕರಿಗಿರಿ ಹಾಗೂ ಗೋಪಣ್ಣನ ಸ್ವಪ್ನದಲ್ಲಿ ಕಾಣಿಸಿಕೊಂಡ ವೆಂಕಣ್ಣಾಚಾರ್ಯರು ಇಬ್ಬರೂ ಹರಿಕಥೆ ಮಾಡುವಂತೆ ಆದೇಶಿಸಿದರಂತೆ. ಹೀಗೆ ವೀಣೆ, ವೀಣೆಯಿಂದ ಸಂಗೀತ, ಸಂಗೀತದಿಂದ ನಾಟಕ, ನಾಟಕದಿಂದ ಹರಿಕಥೆಯ ಸೋಪಾನವನ್ನು ಹತ್ತಿದರು ಗೋಪಣ್ಣ. ಗೋಪಣ್ಣನ ಹರಿಕತೆಗೆ ಅಣ್ಣತಮ್ಮಂದಿರದೇ ಪಕ್ಕವಾದ್ಯ. ಅಣ್ಣ ಕರಿಗಿರಿದಾಸರ ಹಾರ್ಮೋನಿಯಂ, ತಮ್ಮ ಜಯಸಿಂಹ ದಾಸರ ಮೃದಂಗ ಅಥವಾ ತಬಲ. ಈ ತ್ರಿವಳಿ ಅತ್ಯಂತ ಜನಪ್ರಿಯವಾಗಿ ತಮ್ಮ ಕಲಾಸಾಮರ್ಥ್ಯದಿಂದ 'ಹರಿಕಥಾ ರತ್ನಾಕರ' ಎಂಬ ಬಿರುದಿಗೆ ಪಾತ್ರರಾದರು ಗೋಪಣ್ಣ. ಮಾಧ್ವಮಠಗಳ ಎಲ್ಲ ಶ್ರೀಗಳಿಂದ ಮಾನ್ಯತೆ ಪಡೆದರು.

ತಮ್ಮ ಜಯಸಿಂಹದಾಸರೂ ಅಣ್ಣನ ಮಾರ್ಗವನ್ನೇ ಅನುಸರಿಸಿದರೂ ಮೃದಂಗ ವಾದನ, ಗಮಕ ಕ್ಷೇತ್ರಗಳಲ್ಲಿ ಸಾಕಷ್ಟು ಪರಿಣತಿ ಗಳಿಸಿದ್ದೇ ಅಲ್ಲದೆ ಮೈಸೂರು ವಾಸುದೇವಾಚಾರ್ಯರ ಕಚೇರಿಗೆ ಮೃದಂಗ ನುಡಿಸಿದ ಹೆಗ್ಗಳಿಕೆ ಇವರದ್ದು.

## ಅವಿಭಕ್ತ ಕುಟುಂಬ

ದಾಸರ ಮನೆ ಒಂದು ಅವಿಭಕ್ತ ಕುಟುಂಬ. ಮನೆಯ ಹೆಸರೇ 'ಕಲಾಚಂದ್ರಿಕ'! ಒಮ್ಮತದ ಜೀವನಕ್ಕೆ ಜ್ವಲಂತ ದೃಷ್ಟಾಂತ. ಈ ಮನೆ ಒಂದು

ಸಂಸ್ಥೆಯಿದ್ದಂತೆ. ದಾಯಾದಿ ಮಾತ್ಸರ್ಯ ಹತ್ತಿರವೂ ಸುಳಿಯದಂಥ ಸುಂದರ ಸಂಸಾರ. ಅಣ್ಣತಮ್ಮಂದಿರು, ವಾರಗಿತ್ತಿಯರು ಅವರವರ ಮಕ್ಕಳು ಯಾವತ್ತೂ ಸ್ನೇಹಭಾವದಿಂದಿದ್ದು ಆ ಮನೆ ಒಂದು ನಂದಗೋಕುಲದಂತಿತ್ತು. ಒಪ್ಪೊತ್ತಿಗೆ ಏನಿಲ್ಲೆಂದರೂ ಸುಮಾರು ೮೦ ರಿಂದ ನೂರು ಜನ ಊಟಕ್ಕೆ ಕೂಡುತ್ತಿದ್ದರು. ಎಲ್ಲರೂ ಮನೆಯವರೇ. ಬಡಿಸುವವರ ಉಪಚಾರಕ್ಕೇನೂ ಕೊರತೆಯಿರಲಿಲ್ಲ. ಪ್ರತಿಯೊಬ್ಬ ಸದಸ್ಯನೂ ತಮಗೆ ನಿಗದಿತವಾದ ಕೆಲಸವನ್ನು ಹಿರಿಯರು ಒಪ್ಪುವಂತೆ ಮಾಡಿಕೊಂಡು ಸ್ನೇಹ ಶೀಲರಾಗಿ ಇರುತ್ತಿದ್ದರು. ಇವರೆಲ್ಲರಿಗೂ ಗೋಪಣ್ಣನೇ ನಿರ್ದೇಶಕ. ಅಣ್ಣ ಕರಿಗಿರಿದಾಸರು ಈ ಜವಾಬ್ದಾರಿಯನ್ನೆಲ್ಲ ತಮ್ಮನಿಗೇ ವಹಿಸಿದ್ದರು. ಕಾರಣ ಗೋಪಣ್ಣ ಒಳ್ಳೆ ವ್ಯವಹಾರಸ್ಥ. ತಮ್ಮಂದಿರೂ ಅಣ್ಣನಲ್ಲಿ ಅಷ್ಟೇ ನಿಷ್ಠೆಯಿಂದಿದ್ದರು. ಗೋಪಣ್ಣನೂ ಅಷ್ಟೇ ಯಾವುದೇ ಕೆಲಸ ನಿರ್ವಹಿಸಬೇಕಾದರೂ ದಿಢೀರ್ ನಿರ್ಧಾರಕ್ಕೆ ಬಂದವರಲ್ಲ. ಅಳೆದು-ಸುರಿದು ಅದರ ಫಲಾಫಲಗಳನ್ನು ವಿವೇಚಿಸಿ-ಸಹೋದರರೊಡನೆ ಮುಕ್ತ ಮನಸ್ಸಿನಿಂದ ಚರ್ಚಿಸಿ ಒಂದು ನಿರ್ಧಾರಕ್ಕೆ ಬರುತ್ತಿದ್ದರು. ಇದೇ ಅವರ ಪ್ರಭಾತ್ ಸಂಸ್ಥೆ ಊರ್ಜಿತವಾಗಲು ಕಾರಣ.

ಹರಿಕಥೆ ಮಾಡುವಾಗಲೂ ಅವರದ್ದು ಇದೇ ಸಂಪ್ರದಾಯ. ಬೇಕಾಬಿಟ್ಟಿ ಕಥೆ ಎಂದೂ ಮಾಡಿದವರಲ್ಲ. ಯಾವುದೇ ಒಂದು ಕಥಾಪ್ರಸಂಗವನ್ನು ತೆಗೆದುಕೊಂಡರೂ ಅದನ್ನು ಆಳವಾಗಿ ಅಧ್ಯಯನ ಮಾಡಿ-ಅದರಲ್ಲಿ ಉಲ್ಲೇಖಿತವಾಗಿರುವ ಶಾಸ್ತ್ರ ಸಂಪ್ರದಾಯಗಳ ಕುರಿತು ಕಕ್ಕ ವೇಣುಗೋಪಾಲದಾಸರ ಬಳಿ ಚರ್ಚಿಸಿ ಅವರ ಮಾರ್ಗದರ್ಶನ ಪಡೆಯುತ್ತಿದ್ದರು. ಸಂಸ್ಕೃತ ವಿದ್ಯಾಭ್ಯಾಸ ಮಾಡಿದ್ದ ಗೋಪಣ್ಣ ಶಾಸ್ತ್ರಾಧ್ಯಯನ ಮಾಡಿ ಅದರಲ್ಲೂ ಪಾಂಡಿತ್ಯ ಹೊಂದಿದ್ದರು.

## ಪ್ರಭಾತ್ ಕಲಾಸಂಸ್ಥೆ

ಗೋಪೀನಾಥದಾಸರು ತಮ್ಮ ಕಾರ್ಯಕ್ರಮದ ವೇಳೆಯಲ್ಲಿ ಅನೇಕ ತಾಂತ್ರಿಕ ಸೌಲಭ್ಯಗಳ ಕೊರತೆಯನ್ನು ಸ್ವತಃ ಅನುಭವಿಸಿ ಅದನ್ನು ನೀಗಲು ಸೂಕ್ತ ಪರಿಹಾರ ಕಲ್ಪಿಸುವ ಉದ್ದೇಶದಿಂದ ತಮ್ಮದೇ ಸೌಂಡ್ ಸಿಸ್ಟಂ ಆರಂಭಿಸಿದರು. ಹೀಗೆ ರೂಪತಾಳಿತು ಪ್ರಭಾತ್ ಸೌಂಡ್ ಸಿಸ್ಟಂ. ನಾಟಕ ಕ್ಷೇತ್ರದಲ್ಲೂ ಸಾಕಷ್ಟು ಅನುಭವವಿದ್ದುದರಿಂದ ರಂಗಕ್ಕೆ ಬಳಸುವ ಪರದೆಗಳು, ಸೈಡ್‌ವಿಂಗ್ಸ್ - ಪೌರಾಣಿಕ ನಾಟಕಗಳಿಗೆ ಬೇಕಾಗುವ ಪೋಷಾಕುಗಳು ಇತ್ಯಾದಿ ಸೌಲಭ್ಯಗಳನ್ನು ಒದಗಿಸಲು ಉದ್ಯುಕ್ತರಾದರು. ಅಷ್ಟೇ ಅಲ್ಲ ನಾಟಕಗಳಿಗೆ ಸ್ಕ್ರಿಪ್ಟ್ ಬರೆದು ನಟವರ್ಗದವರನ್ನು ತಾವೇ ಒಟ್ಟುಗೂಡಿಸಿ

ನಾಟಕ, ಬ್ಯಾಲೆ ಮೊದಲಾದುವುಗಳನ್ನು ನಿರ್ದೇಶಿಸಿದರು. ಹೀಗೆ ಕಿರಿಯರ ನಾಟಕ ಬಳಗ ತಲೆಯೆತ್ತಿತ್ತು. ಇವರ ಕರ್ನಾಟಕ ವೈಭವ, ಸಿಂಡ್ರೆಲಾ, ಪುಣ್ಯಕೋಟಿ ಪ್ರಯೋಗಗಳು ಅತ್ಯಂತ ಯಶಸ್ವಿಯಾಗಿ ಶತದಿನಗಳ ನ್ನಾಚರಿಸಿದವು. ರಾಷ್ಟ್ರ-ಅಂತರಾಷ್ಟ್ರೀಯ ಖ್ಯಾತಿ ಗಳಿಸಿದವು.

## ತ್ರಿವಿಕ್ರಮ

ಹೀಗೆ ಕನ್ನಡ ಜನತೆಯ ಆತ್ಮೀಯ ಗೋಪಣ್ಣ ವರ್ಣರಂಜಿತ ವ್ಯಕ್ತಿತ್ವದ ತ್ರಿವಿಕ್ರಮನಾದ. ಹರಿಕಥೆ ತಾಳಗಳ ನಿನಾದದಿಂದ ಧ್ವನಿಸುರಳಿಗಳು ತಯಾರಿಕೆಯ ತನಕ, ಸಿದ್ದಾಪುರದಲ್ಲಿ ಪ್ರಾರಂಭವಾದ ಹರಿಕಥೆಯಿಂದ ಸಿಂಗಪುರ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪಡೆಯುವಲ್ಲಿಯವರೆಗೆ ಕರ್ನಾಟಕದ ವೈಭವವನ್ನು ಜಗತ್ತಿನಾದ್ಯಂತ ಮೆರೆದ ಕಲಾತಪಸ್ವಿ. ಇದಕ್ಕೆಲ್ಲ ಪ್ರಭಾತ್ ಸಂಸ್ಥೆ ಕಾರಣವಾದರೆ ಅದರ ರೂವಾರಿ ಗೋಪಣ್ಣ. ಗೋಪಣ್ಣನದು ಅಕ್ಷಯ ಬತ್ತಳಿಕೆ. ದೇಹಿ ಎಂದವರಿಗೆ ನಾಸ್ತಿ ಎಂದವರಲ್ಲ. ತಮ್ಮ ಅನೇಕ ನಾಟಕಗಳನ್ನು 'ಸಹಾಯಾರ್ಥ' ಪ್ರದರ್ಶನವಾಗಿ ಮಾಡಿ ಅನೇಕ ಸಂಘ-ಸಂಸ್ಥೆಗಳಿಗೆ, ಧರ್ಮಕಾರ್ಯಗಳಿಗೆ ನೆರವಾಗಿದ್ದಾರೆ. ತಿನ್ನಕ್ಕೂ ಗತಿಯಿಲ್ಲದೆ ಪರದಾಡುವಂಥ ಕಲಾವಿದರನ್ನು ಗುರ್ತಿಸಿ ತಮ್ಮ ಮನೆಗೆ ಕರೆತಂದು ಅವರನ್ನಿಟ್ಟುಕೊಂಡು ಸಾಕಿದ್ದಾರೆ. ಇವರ ಕಲಾಸೇವೆಯನ್ನು ಗುರ್ತಿಸಿದ ಸರ್ಕಾರ ಅವರಿಗೆ ತಿಂಗಳ ಮಾಸಾಶನವನ್ನು ಗೌರವಧನವಾಗಿ ನೀಡಿದಾಗ ಅದನ್ನು ನಯವಾಗಿ ತಿರಸ್ಕರಿಸಿ ಯಾರಾದರೂ ಬಡವರಿಗೆ ಕೊಡುವಂತೆ ಸಲಹೆಮಾಡಿದ ಧೀಮಂತ ವ್ಯಕ್ತಿತ್ವ ಗೋಪಣ್ಣನದು.

## ನನಸಾಗದೇ ಉಳಿದ ಕನಸು


ಕರ್ನಾಟಕದ ಕಲಾವಿದರಿಗೆಂದೇ ಒಂದು ಕಲಾಭವನ ನಿರ್ಮಾಣ ಮಾಡಿ 'ಪ್ರಭಾತ್ ಥಿಯೇಟರ್' ಒಂದನ್ನು ಸ್ಥಾಪಿಸಬೇಕೆಂಬ ಕನಸು ಕಾಣುತ್ತಿದ್ದರು ಗೋಪಣ್ಣ. ಅದಕ್ಕೆ ಪ್ರಯತ್ನ ನಡೆಸಿ ಚಾಮರಾಜಪೇಟೆಯ ಪಂಪಮಹಾಕವಿ ರಸ್ತೆಯ ರಾಯರಾಯ ಕಲ್ಯಾಣ ಮಂಟಪದ ಅವರಣ ದಲ್ಲಿರುವ ಖಾಲಿ ನಿವೇಶನಕ್ಕೆ ಶತಪ್ರಯತ್ನ ನಡೆಸಿದ್ದರು. ಆದರೆ ಅದು ಕನಸಾಗಿಯೇ ಉಳಿಯಿತು.

ಪ್ರಯೋಗಗಳಿಗೆ ಇನ್ನೊಂದು ಹೆಸರು ಗೋಪೀನಾಥದಾಸರು. ಪ್ರಯೋಗದಿಂದ ಪ್ರಯೋಗಕ್ಕೆ ಅವರು ಗಳಿಸುತ್ತಿದ್ದ ಯಶಸ್ಸು ಅಪಾರ. ಇದೇ ಅವರ ಯಶಸ್ಸಿನ ಗುಟ್ಟು. ಅವರ ಪ್ರಭಾತ್ ಸಂಸ್ಥೆ ಕರ್ನಾಟಕದ

ಸಮಗ್ರ ಸಂಸ್ಕೃತಿಯ ಒಂದು ಸಂಕ್ಷಿಪ್ತ ಸ್ವರೂಪ. ಅದೇ 'ಕಲಾಚಂದ್ರಿಕಾ'. ಈ ಕಲಾಚಂದ್ರಿಕಾದ ಕಲಾತಪಸ್ವಿಯೇ ಗೋಪೀನಾಥದಾಸರು. ಈ ಕಲಾಚಂದ್ರಿಕಾ ಎಂಬ ದೇಗುಲದಿಂದ ಸೃಷ್ಟಿಯಾದ ಎಲ್ಲ ವಿಭಾಗಗಳ ಸೃಷ್ಟಿಕರ್ತ ಗೋಪಣ್ಣ. ಪ್ರಭಾತ್ ರಂಗಶಾಲೆ, ಪ್ರಭಾತ್ ಚಲನಚಿತ್ರ, ಪ್ರಭಾತ್ ಕ್ಲಿನಿಕ್, ಪ್ರಭಾತ್ ಸೌಂಡ್ ಸ್ಟುಡಿಯೋ, ಪ್ರಭಾತ್ ಶಿಶುವಿಹಾರ, ಗುರುರಾಜ ನಾಟಕ ಮಂಡಲಿ, ಕರ್ನಾಟಕ ಹರಿದಾಸ ಪರಂಪರೆ ಒಂದೇ ಎರಡೇ ಅವರ ಕನಸಿನ ಕೂಸು ಕರ್ನಾಟಕ ವೈಭವದಂತೆ ಇವೂ ಎಲ್ಲವೂ ವೈಭವೋಪೇತವೇ. ಗೋಪಣ್ಣನ ಹೆಸರಿನೊಂದಿಗೆ ಹಾಸುಹೊಕ್ಕಾಗಿ ಬೆಳೆದ ಸಂಸ್ಥೆ ಪ್ರಭಾತ್.

ಹೀಗೆ ಕಲಾರಂಗದ ಕಣ್ಮಣಿಯಾಗಿ, ಕಲಾತಪಸ್ವಿಯಾಗಿ ಕಲಾ ಚಂದ್ರಿಕಾದ ಗೋಪಣ್ಣ ಹೃದಯ ಸಂಬಂಧದ ತುರ್ತುಚಿಕಿತ್ಸೆಗಾಗಿ ವೆಲ್ಲೂರಿಗೆ ತೆರಳಿದರು. ಆದರೆ ಮರಳಿ ಬಂದದು ಅವರ ಪಾರ್ಥಿವ ಶರೀರ. ಹರಿದಾಸ ವಾಙ್ಮಯದ ಹರಿಕಾರರಾಗಿದ್ದ ಹರಿಕಥಾ ರತ್ನಾಕರರು ಇನ್ನಿಲ್ಲವಾದರು - ನಾಡಿನ ಕಲಾರಂಗವನ್ನು ತಬ್ಬಲಿ ಮಾಡಿದರು. ಅವರೇ ಕಟ್ಟಿಬೆಳೆಸಿದ ಪ್ರಭಾತ್ ಸಂಸ್ಥೆಯ ಮೂಲಕ ಅವರ ಹೆಸರು ಇಂದಿಗೂ ಹಚ್ಚಹಸಿರು.

ಆಧಾರ : **ಕಲಾತಪಸ್ವಿ - ಡಾ॥ ಅರಳುಮಲ್ಲಿಗೆ ಪಾರ್ಥಸಾರಥಿ**



# ಕೀರ್ತನ ಕೇಸರಿ, ಕೀರ್ತನ ಕಲಾವಿಚಕ್ಷಣ

# ಆರ್. ಗುರುರಾಜುಲು ನಾಯ್ಡು

ಕೀರ್ತನ ಕಲಾಕ್ಷೇತ್ರದಲ್ಲಿ ದಿ|| ಆರ್. ಗುರುರಾಜುಲು ನಾಯ್ಡುರವರ ಹೆಸರು ಚಿರಸ್ಥಾಯಿಯಾಗಿ ನಿಲ್ಲುವಂಥಾದ್ದು. ಕೀರ್ತನ ಕಲೆ ಅಧೋಗತಿಯತ್ತ ಸಾಗುತ್ತಿದ್ದಾಗ ಅದಕ್ಕೊಂದು ಸ್ವರೂಪ ನೀಡಿ, ಅದನ್ನು ಜನರಂಜನಾ ಮಾಧ್ಯಮವನ್ನಾಗಿ ಪರಿವರ್ತಿಸಿ ಒಂದು ವಿನೂತನ ವೇದಿಕೆ ಕಲ್ಪಿಸಿದ ಶಿಲ್ಪಿ ನಾಯ್ಡುರವರು. ಇದಕ್ಕೆ ಕಾರಣವಿಲ್ಲದಿಲ್ಲ. ಒಂದು ಕಾಲದಲ್ಲಿ ರಂಗಭೂಮಿ ಅಥವಾ ನಾಟಕ ಕಲಾಕ್ಷೇತ್ರ ತನ್ನದೇ ಆದ ಛಾಪು ಹಾಕುತ್ತಾ ಸಂಗೀತ-ಅಭಿನಯ-ಇತಿಹಾಸಗಳ ಸಂಗಮವಾಗಿ ಮೆರೆದಿತ್ತು. ಕ್ರಮೇಣ ಚಲನಚಿತ್ರರಂಗ ಹೆಚ್ಚು ಜನಪ್ರಿಯವಾಗತೊಡಗಿದಾಗ ನಾಟಕದ ಕಡೆ ಜನರ ಆಸಕ್ತಿ ಕುಂಠಿತವಾಗತೊಡಗಿತು. ನಾಟಕದ ನಾಯಕ ಪಾತ್ರಧಾರಿಗಳು ಅಂದರೆ ರಾಜಾಪಾರ್ಟು ಮಾಡುತ್ತಿದ್ದ ಕಲಾವಿದರಿಗೂ ಸಿನಿಮಾ ಗೀಳು ಹತ್ತಿ ಕೆಲವರು ನಟವರ್ಗದಲ್ಲಿದ್ದರೆ ಕೆಲವರು ತಾವೇ ಚಿತ್ರ ನಿರ್ಮಿಸುವ ಸಾಹಸಕ್ಕೂ ಕೈಹಾಕಿದರು-ಕೈಸುಟ್ಟುಕೊಂಡರು. ಉಳಿದ ನಟವರ್ಗದವರು ನಾಟಕದಲ್ಲೂ ಸ್ಥಳವಿಲ್ಲದೆ, ಸಿನಿಮಾಗಳಲ್ಲೂ ಅವಕಾಶ ವಂಚಿತರಾಗಿ ಉದರಂಭರಣಕ್ಕಾಗಿ ತಮ್ಮಲ್ಲಿದ್ದ ಸಂಗೀತ - ಅಭಿನಯದ ಕೌಶಲ್ಯತೆಯನ್ನೂ ಉಪಯೋಗಿಸಿ ಕೊಂಡು ಹರಿಕಥಾ ಕ್ಷೇತ್ರಕ್ಕೆ ಪದಾರ್ಪಣ ಮಾಡಿದರು. ಇದಕ್ಕೂ ಮುಂಚೆ ಹರಿಕಥಾ ಕಲೆ ಕೇವಲ ಜನರಂಜನೆಯಾಗಿರದೆ ಸಮಾಜ ಸುಧಾರಣಾ ಪ್ರೇರಕ ಶಕ್ತಿಯಾಗಿತ್ತು, ಭಕ್ತಿಮಾರ್ಗಕ್ಕೆ ಸೋಪಾನವಾಗಿತ್ತು. ಆದರೆ ಈ ನಾಟಕೀಯದ ಪ್ರವೇಶದಿಂದಾಗಿ ಹರಿಕಥಾ ಕಲೆ ಅಭಿವೃದ್ಧಿಕಾಣದೆ ಪ್ರೋತ್ಸಾಹ ಇಳಿಮುಖ ವಾಯಿತು. ಇಂಥಾ ಸನ್ನಿವೇಶದಲ್ಲಿ ಕೀರ್ತನ ಕಲೆ ಕೇವಲ ಜನರಂಜನೀಯ ವಲ್ಲ, ಸಮಾಜದ ಓರೆಕೋರೆಗಳನ್ನು ತಿದ್ದಿ ಸುಧಾರಣಾ ಮಾರ್ಗಕ್ಕೆ ಇದು ಮುಖ್ಯಸೋಪಾನ-ಭಕ್ತಿ ಪಂಥದ ಮೂಲಸ್ವರೂಪ ಎಂದು ತೋರಿಸಿ ಕೊಟ್ಟವರು ಗುರುರಾಜುಲು ನಾಯ್ಡುರವರು. ಇವರಿಗೂ ನಾಟಕ - ಸಿನಿಮಾರಂಗದ ಗೀಳು ಇದ್ದರೂ ಹರಿಕಥೆಗೆ ಹೆಚ್ಚಾಗಿ ಅಂಟಿಕೊಂಡವರು. ಇದಕ್ಕೆ ಇವರಿಗೆ ಸ್ಫೂರ್ತಿ ಅವರ ತಂದೆಯವರಾದ ರಾಮಸ್ವಾಮಿ

ನಾಯ್ಡುರವರು, ಗಾನವಿಶಾರದ ಡಾ॥ ಬಿ. ದೇವೇಂದ್ರಪ್ಪನವರ ಸಮಕಾಲೀನರು.

## ಜನನ-ಬಾಲ್ಯ

ಗುರುರಾಜುಲು ನಾಯ್ಡುರವರು ಹುಟ್ಟಿದ್ದು ೧೯೩೩ರಲ್ಲಿ ಮೈಸೂರಿನಲ್ಲಿ. ತಂದೆ ರಾಮಸ್ವಾಮಿನಾಯ್ಡುರವರು ಆಗ್ಗೆ ಮೈಸೂರಿನ ಪ್ರಾಥಮಿಕ ಶಾಲೆಯೊಂದರ ಅಧ್ಯಾಪಕ ರಾಗಿದ್ದರು. ಜೊತೆಗೆ ಅನುವಂಶೀಕವಾಗಿ ಬಂದ ಹರಿಕಥಾ ಕಲೆಯನ್ನು ರೂಡಿಸಿಕೊಂಡು ಮೈಸೂರಿನ ಕೆಲವೇ ಪ್ರಮುಖ ಹರಿಕಥಾ ವಿದ್ವಾಂಸರಲ್ಲೊಬ್ಬರಾಗಿದ್ದವರು. ಗಾನವಿಶಾರದ ಡಾ॥ ಬಿ. ದೇವೇಂದ್ರಪ್ಪನವರ ಸಮಕಾಲೀನರು, ಆತ್ಮೀಯ ಗೆಳೆಯರು. ಹೀಗಾಗಿ ಮಗ ಗುರುರಾಜನನ್ನು ಅವರ ಶಿಷ್ಯ ಎಂ. ಎನ್. ಗೋವಿಂದಸ್ವಾಮಿ ಅವರ ಬಳಿ ಸಂಗೀತ ಕಲಿಯಲು ಏರ್ಪಾಡು ಮಾಡಿದರು. ಅತ್ಯಂತ ಎಳೆಯ ವಯಸ್ಸಿನಲ್ಲೇ ಅತಿ ಹಿರಿಯ ವಿದ್ವಾಂಸರಿಂದ ಸಂಗೀತ ಕಲಿಯುವ ಸುಯೋಗ ಬಾಲಕ ಗುರುರಾಜನಿಗೆ. ಜೊತೆಗೆ ತಂದೆಯಿಂದ ಹರಿಕಥಾ ಶಿಕ್ಷಣ. ಈ ಇಬ್ಬರ ಕಠಿಣ ಶಿಕ್ಷಣದ ಪರಿಣಾಮವಾಗಿ ಗುರುರಾಜ ತನ್ನ ಐದನೆಯ ವಯಸ್ಸಿಗೇ ಹರಿಕಥೆ ಮಾಡುವ ಸಾಮರ್ಥ್ಯಪಡೆದು 'ಬಾಲಹರಿದಾಸ' ನೆನಿಸಿದ. ತಂದೆ ರಾಮಸ್ವಾಮಿ ನಾಯ್ಡುರವರ ಕಥಾ-ಕೀರ್ತನ ಕಾರ್ಯಕ್ರಮದಲ್ಲೆಲ್ಲ ಅವರ ಜೊತೆ ಪಾಲ್ಗೊಳ್ಳುತ್ತಿದ್ದು ಅವರ ಅನಾರೋಗ್ಯದ ಸಂದರ್ಭದಲ್ಲಿ ತಾನೇ ಸ್ವತಂತ್ರವಾಗಿ ಕಥೆ ನೀಡುತ್ತಿದ್ದ. ಹೀಗಾಗಿ ಲೌಕಿಕ ವಿದ್ಯಾಭ್ಯಾಸ ಕುಂಠಿತವಾಗಿ ಮಾಧ್ಯಮಿಕ (ಎಲ್. ಎಸ್.) ಶಾಲಾ ಶಿಕ್ಷಣಕ್ಕೇ ಸೀಮಿತ ವಾಯಿತು.

## ಬೆಂಗಳೂರಿಗೆ ಆಗಮನ

ತಂದೆಯವರ ನಿಧನಾನಂತರ ಮೈಸೂರಿನಿಂದ ಬೆಂಗಳೂರಿಗೆ ಬಂದ ಗುರುರಾಜನಿಗೆ ಭಾರತೀಯ ವಿಮಾನ ಕಾರ್ಖಾನೆಯಲ್ಲಿ ನೌಕರಿ ದೊರೆತು, ಅಲ್ಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ. ಅವಕಾಶ ದೊರೆತಾಗಲೆಲ್ಲ ಹರಿಕಥಾ ಕಾರ್ಯಕ್ರಮವನ್ನೂ ನೀಡುತ್ತಿದ್ದ. ಒಳ್ಳೆಯ ಕಂಠಶ್ರೀ, ಮಧುರವಾದ ಲಯಬದ್ಧಗಾಯನ, ಅಭಿನಯದ ಪ್ರಾವೀಣ್ಯತೆಯನ್ನು ಕಂಡುಕೊಂಡ ವಿಮಾನಕಾರ್ಖಾನೆಯ ಲಲಿತ ಕಲಾಸಂಘದವರು ತಮ್ಮ ನಾಟಕವೊಂದರಲ್ಲಿ ಗುರುರಾಜುಲು ನಾಯ್ಡುವಿಗೆ ಸ್ವಾಮಿ ವಿವೇಕಾನಂದರ ಪಾತ್ರ ನೀಡಿದಾಗ ಅದನ್ನು ಪ್ರೇಕ್ಷಕರ ಮನಮುಟ್ಟುವಂತೆ ಅಭಿನಯಿಸಿದರಂತೆ. ಆ ನಾಟಕಕ್ಕೆ ಮುಖ್ಯ ಅತಿಥಿಗಳಾಗಿ ಬಂದಿದ್ದವರು ನಾಟಕ- ಚಲನಚಿತ್ರರಂಗದ

ಹಿರಿಯನಟರಾಗಿದ್ದ ಸುಬ್ಬಯ್ಯನಾಯ್ಡುರವರು. ಈ ಹೊತ್ತಿಗಾಗಲೇ ನಾಟಕ-ಚಿತ್ರರಂಗದ ಅಶ್ವಿನೀ ದೇವತೆಗಳಂತಿದ್ದರು ಸುಬ್ಬಯ್ಯನಾಯ್ಡು ಹಾಗೂ ಆರ್. ನಾಗೇಂದ್ರರಾಯರು. ಚಿತ್ರರಂಗದಲ್ಲಂತೂ ಇವರ ಜೋಡಿ ಅತ್ಯಂತ ಜನಪ್ರಿಯವಾಗಿತ್ತು. ವಸಂತಸೇನಾದ ಚಾರುದತ್ತ-ಶಕಾರ ; ಹರಿಶ್ಚಂದ್ರದ ಹರಿಶ್ಚಂದ್ರ-ವಿಶ್ವಾಮಿತ್ರ, ಮನೆಮಾತಾಗಿದ್ದಂಥ ಕಾಲ.

ಆಗ ಸುಬ್ಬಯ್ಯನಾಯ್ಡುರವರು ತಮ್ಮದೇ ಆದ ಸ್ವಂತ ನಾಟಕ ಕಂಪೆನಿ ನಡೆಸುತ್ತಿದ್ದರು. ನಾಗೇಂದ್ರರಾಯರು 'ಆರೆನ್ನಾರ್' ಲಾಂಛನದಲ್ಲಿ ಚಲನಚಿತ್ರ ತಯಾರಿಕೆಯ ಉದ್ಯಮಕ್ಕೆ ತೊಡಗಿದ್ದರು. ಅಂದು ನಾಟಕಕ್ಕೆ ಮುಖ್ಯ ಅತಿಥಿಯಾಗಿ ಬಂದಿದ್ದ ಸುಬ್ಬಯ್ಯನಾಯ್ಡುರವರಿಗೆ ಗುರುರಾಜುಲು ನಾಯ್ಡುರವರ ವಿವೇಕಾನಂದರ ಪಾತ್ರ ನಿರ್ವಹಣೆ ಬಹು ಮೆಚ್ಚುಗೆಯಾಗಿ ಆತನನ್ನು ತಮ್ಮ ಕಂಪೆನಿಗೆ ಸೇರುವಂತೆ ಆಹ್ವಾನ ನೀಡಿದರಂತೆ. ಸರಿ ಅಭಿನಯ - ಸಂಗೀತ - ಹರಿಕಥೆಗಳನ್ನೇ ಮೈಗೂಡಿಸಿಕೊಂಡಿದ್ದ ಗುರುರಾಜುಲುನಾಯ್ಡು ಈ ತಾಬೇದಾರಿ ಕೆಲಸಕ್ಕೆ ವಿದಾಯ ಹೇಳಿ ನಾಯ್ಡುರವರ ಕಂಪೆನಿ ಸೇರಿದರು. ಅಭಿನಯ-ನಟನಾ ಕಲೆಯಲ್ಲಿ ನಿಷ್ಣಾತರಾದರು. ತಮ್ಮ ಕಂಠಶ್ರೀಗೆ ತಕ್ಕಂತೆ ಹೆಚ್ಚಾಗಿ ವೀರರಸ ಪಾತ್ರಗಳನ್ನೇ ಆಯ್ಕೆಮಾಡಿಕೊಳ್ಳುತ್ತಿದ್ದರು. ಸುಬ್ಬಯ್ಯ ನಾಯ್ಡುರವರೂ ಈತನಿಗೆ ವಿಶೇಷ ಶಿಕ್ಷಣ ನೀಡಿ ಈತ ಮುಂದೆ ತಮ್ಮ ಉತ್ತರಾಧಿಕಾರಿಯಾಗಿ ತಮ್ಮ ಹೆಸರನ್ನುಳಿಸುತ್ತಾನೆ ಎಂಬ ಕನಸು ಕಂಡರು. ಆಗ ಇವರು ಅಭಿನಯಿಸುತ್ತಿದ್ದ ಎಚ್ಚಮ್ಮನಾಯಕ ನಾಟಕದ ಚಾಂದ್‌ಖಾನ್ ಪಾತ್ರ ; ಭೂಕೈಲಾಸದ ರಾವಣನ ಪಾತ್ರ ಆ ಕಾಲಕ್ಕೆ ಮನೆಮಾತಾಗಿತ್ತು. ಇಷ್ಟಾದರೂ ಪಾರಂಪರ್ಯವಾಗಿ ಬಂದ ಹರಿಕಥಾಕಲೆಯನ್ನು ಉಪೇಕ್ಷೆ ಮಾಡಲಿಲ್ಲ. ಅವಕಾಶ ದೊರೆತಾಗಲೆಲ್ಲ ಅದನ್ನು ನಡೆಸುತ್ತಾ ಬಂದರು. ಮುಂದೆ ಸುಬ್ಬಯ್ಯನಾಯ್ಡುರವರ ನಿಧನಾನಂತರ ನಾಟಕ ಕಂಪೆನಿ ಮುಚ್ಚಿ ಇವರಿಗೆ ಹರಿಕಥಾಕಲೆಯೇ ಮುಖ್ಯ ಉದ್ಯಮ ವಾಯಿತು.

## ಚಿತ್ರರಂಗಕ್ಕೆ

ನಾಟಕರತ್ನ ಆರ್. ನಾಗೇಂದ್ರರಾಯರು ತಮ್ಮ 'ಆರೆನ್ನಾರ್' ಲಾಂಛನದಲ್ಲಿ ಅನೇಕ ಚಿತ್ರ ತಯಾರಿಸಿದ್ದರು. ಜಾತಕಫಲ, ಪ್ರೇಮದ ಪುತ್ರಿ, ವಿಜಯನಗರದ ವೀರಪುತ್ರ ಮೊದಲಾದ ಚಿತ್ರಗಳು ಜನಪ್ರಿಯವಾಗಿದ್ದುವು. ನಟರಿಗಾಗಿ ಹೊಸಶೋಧನವನ್ನೂ ಆರಂಭಿಸಿದ್ದರು. ರಾಯರು ಸುಬ್ಬಯ್ಯನಾಯ್ಡುರವರ ನಿಕಟವರ್ತಿಗಳು. ಹುಡುಗನ ಅಭಿನಯಕ್ಕೆ ಸೋತರು. ಅದರಲ್ಲೂ ಭೂಕೈಲಾಸದ ರಾವಣ ಪಾತ್ರ ಅವರಿಗೆ ತುಂಬಾ ಹಿಡಿಸಿತು. ಆತನ ಅಭಿನಯ-ಮಾತುಗಾರಿಕೆ, ಹಾಡುಗಳ ಮೋಡಿಗೆ ಸಿಲುಕಿ

ಆನಂದಭಾಷ್ಪ ಸುರಿಸಿದರು. ಸುಬ್ಬಯ್ಯನಾಯ್ಡುರವರ ಬೆನ್ನುತಟ್ಟಿದರು. ಈ ನಟನನ್ನು ತಮಗೆ ಕೊಡುವಂತೆ ಬೇಡಿದರು. ರಾಯರು ಮುಂದೆ ತೆಗೆಯ ಬೇಕಾದ 'ಆನಂದಭಾಷ್ಪ' ಚಲನಚಿತ್ರದ ಮೂವರ ನಾಯಕರುಗಳ ಪೈಕಿ ಒಬ್ಬ ನಾಯಕನ ಪಾತ್ರಕ್ಕೆ ಗುರುರಾಜುಲುನಾಯ್ಡು ಆಯ್ಕೆಯಾದರು. ರಾಯರೇ ಇವರಿಗೆ 'ಅರುಣ್‌ಕುಮಾರ್' ಎಂದು ನಾಮಕರಣ ಮಾಡಿದರು. ಆದರೆ ಆ ಚಿತ್ರ ಸಂಪಾದನೆಯ ದೃಷ್ಟಿಯಿಂದ ವಿಫಲವಾದರೂ ತನ್ನ ಅಭಿನಯದಿಂದ 'ಅರುಣ್‌ಕುಮಾರ್' ಚಿತ್ರರಂಗದಲ್ಲಿ ಹೆಸರುಮಾಡಲು ಅವಕಾಶ ಕಲ್ಪಿಸಿತು. ನಾಗೇಂದ್ರರಾಯರ ಸಂಸ್ಥೆಯೇ ಅಲ್ಲದೆ ಬೇರೆ ಬೇರೆ ಚಿತ್ರತಯಾರಕರಿಂದಲೂ ಇವರಿಗೆ ಕರೆ ಬರಲು ಆರಂಭವಾಯಿತು. 'ನಕ್ಕರೆ ಅದೇ ಸ್ವರ್ಗ', 'ಮಿಸ್ ಲೀಲಾವತಿ', 'ಹಣ್ಣೆಲೆ ಚಿಗುರಿದಾಗ', ಮುಂತಾದ ಚಿತ್ರಗಳಲ್ಲಿನ ಇವರ ಅಭಿನಯ ಮನೆಮಾತಾಗಿ 'ಅರುಣ್ ಕುಮಾರ್' ಹೆಸರು ನಿಂತು 'ಗುರುರಾಜುಲು ನಾಯ್ಡು' ಹೆಸರು ಮರೆಯುವಂತಾಯ್ತು. ಆದರೆ ಧೃತಿಗೆಡದ ನಾಯ್ಡುರವರು ಮತ್ತೆ ಗುರುರಾಜುಲುನಾಯ್ಡುವಾಗಿ ಕೀರ್ತನ ರಂಗಕ್ಕೆ ಮರುಪ್ರವೇಶ ಮಾಡಿದರು. ಅದನ್ನೇ ತಮ್ಮ ಉಸಿರಾಗಿಸಿ ಕೊಂಡರು. ನಾಟಕ-ಸಿನಿಮಾ ಎರಡೂ ಮಾಧ್ಯಮದ ಮಸಾಲೆಗಳನ್ನು ಹರಿಕಥೆಯಲ್ಲಿ ಸೇರಿಸಿ ತಮ್ಮ ಉಚ್ಚಕಂಠಶ್ರೀ - ವಾಕ್ಚಾತುರ್ಯಗಳ ಮೂಲಕ - ವಿಡಂಬನಾತ್ಮಕ ಉಪಕತೆಗಳ ಮೂಲಕ ಈ ಕಲೆ ಜನರಂಜನೀಯವಾಗಿ ಪರಿವರ್ತಿಸುವಲ್ಲಿ ಸಫಲರಾದರು. ಚಿತ್ರರಂಗದ ಬೇಡಿಕೆ ಕುಂಠಿತವಾಯಿತು, ಹರಿಕಥಾ ಕ್ಷೇತ್ರದ ಬೇಡಿಕೆ ಹೆಚ್ಚಾಯಿತು.

ರಾಮೋತ್ಸವ, ಗಣೇಶೋತ್ಸವ, ಅಣ್ಣಮ್ಮದೇವೀ ಉತ್ಸವಗಳಲ್ಲಿ ಇವರ ಹರಿಕತೆಯಿಲ್ಲದೆ ಕಾರ್ಯಕ್ರಮವೇ ನಡೆಯುತ್ತಿರಲಿಲ್ಲ. ನಾಯ್ಡುರವರದ್ದು ಒಳ್ಳೆಯ ದಷ್ಟಪುಷ್ಟ ವ್ಯಕ್ತಿತ್ವ, ಅದೇ ಅವರ ವಿವೇಕಾನಂದರ ಪಾತ್ರದ ಆಯ್ಕೆಗೆ ಕಾರಣ. ಅಂದಿನಿಂದ ಹರಿಕತೆಗೂ ಅದೇ ರೀತಿಯ ಪೋಷಾಕು. ಶುಭ್ರವಾದ ಬಿಳಿ ಕಚ್ಚೆಪಂಚೆ, ಜುಬ್ಬ ಸೊಂಟಕ್ಕೊಂದು ಕಾವಿ ಉತ್ತರೀಯ ಬಿಗಿದು ಶಿರಸ್ಸಿಲ್ಲಿ ಭೂಷಣವಾಗಿ ಕೋರೆ ಪೇಟ, ಅದೂ ಕಾವಿ ಬಣ್ಣದ್ದು. ಧರಿಸಿ ನಿಂತರೆ ದೂರದಿಂದ ನೋಡಿದರೆ ಸ್ವಾಮಿ ವಿವೇಕಾನಂದರ ವ್ಯಕ್ತಿತ್ವವೇ! ಅದೇ ರೀತಿಯ ಸಿಂಹವಾಣಿ ಇವರ ಕಂಠಶ್ರೀಯಿಂದ ಹೊರಹೊಮ್ಮಿ ಜನರಲ್ಲಿ ಪ್ರತಿಧ್ವನಿಸುತ್ತಿತ್ತು. ಇವರೇನಾ ಗುರುರಾಜುಲುನಾಯ್ಡು ಎಂದು ಜನ ಕೇಳಬೇಕು? ಕಥಾಸಂದರ್ಭದಲ್ಲಿ ಅವರ ಹಾವ-ಭಾವ, ಘರ್ಜನೆ, ಅಳು-ವಿಡಂಬನೆ-ಆ ವಾಗ್ಝರಿಯನ್ನೇ ನೋಡಲು ಬರುವ ಜನ ಸಮೂಹಕ್ಕೆ ಮಿತಿಯಿರಲಿಲ್ಲ.

ಇವರದ್ದು ದಿನಕ್ಕೇ ಒಂದು ಕಥೆಯಲ್ಲಿ ಸಿನಿಮಾಗಳ ದಿನವಹಿ ಹಲವಾರು ಪ್ರದರ್ಶನಗಳಂತೆ ಇವರ ಕಥೆಯೂ ಸಹ. ಬೆಳಗಿನ ಆಟ, ಮ್ಯಾಟಿನೀ, ಮೊದಲ ಪ್ರದರ್ಶನ ಸೆಕೆಂಡ್ ಶೋಗಳಂತೆ ದಿನಕ್ಕೆ ೩-೪ ಕಡೆಗೆ ೫ ಕಥೆಗಳನ್ನೂ ಮಾಡಿದ್ದುಂಟು. ಕೆಲವೊಂದು ಉತ್ಸವಗಳ ಸಂದರ್ಭದಲ್ಲಿ ಈ ಮಿತಿಯೂ ಮೀರಿದ್ದುಂಟು. ಹೀಗಾಗಿ ತಮ್ಮ ದೇಹಾರೋಗ್ಯದ ಕಡೆ ಗಮನವೇ ಇಲ್ಲದಷ್ಟು ಕಾರ್ಯಕ್ರಮ ನೀಡಿ ಶರೀರ ಜರ್ಝರಿತವಾಯಿತು.

ವ್ಯಕ್ತಿಶಃ ಗುರುರಾಜುಲು ನಾಯ್ಡು ಅತ್ಯಂತ ಸ್ನೇಹಜೀವಿ. ಸದಾ ಹಸನ್ಮುಖಿ. ಅಜಾತ ಶತ್ರು. ಎಷ್ಟೇ ಕಷ್ಟಬಂದರೂ ಸಹನೆಯಿಂದ ಸುಧಾರಿಸಿ ಕೊಂಡು ಹೋಗುವ ಸ್ವಭಾವ. ಇವರ ಶಿಷ್ಯಪರಂಪರೆಯೂ ಅತಿ ದೊಡ್ಡದು. ಬಿ. ಪಿ. ರಾಜಮ್ಮ, ಕನಕದಾಸರು, ಮೈಸೂರು ಸೂರ್ಯನಾರಾಯಣದಾಸರು, ಹಿನ್ನೆಲೆಗಾಯಕಿ ಸಿ. ಕೆ. ರಮಾ, ಅಶ್ವತ್ಥನಾರಾಯಣದಾಸ್, ಡಾ|| ಕಿರಣ್‌ಕುಮಾರ್, ನಂಜುಂಡಸ್ವಾಮಿ, ವಿಮಲಾನಂದ ದಾಸ್, ತುಮಕೂರು ಲಕ್ಷ್ಮಣ್ ಅಲ್ಲದೆ ಹೆಣ್ಣು ಮಕ್ಕಳು ಶೋಭಾನಾಯ್ಡು, ಶೀಲಾನಾಯ್ಡು ಎಲ್ಲರೂ ಗುರುಗಳನ್ನು ಮೀರಿಸುವವರೇ. ಅವರ ಹೆಸರನ್ನು ಚಿರಂತನವಾಗಿ ನಿಲ್ಲುವಂತೆ ಶ್ರಮಿಸಿದ್ದಾರೆ.

ತಮ್ಮ ಅತೀವ ಕಾರ್ಯಕ್ರಮಗಳಿಂದ ಬಿಡುವೇ ಇಲ್ಲದಂತೆ ಕಥೆನಡೆಸಿ ದೇಹಶ್ರಮ ಮಾಡಿಕೊಂಡರು. ಅದೇ ಅವರಿಗೆ ಮುಳುವಾಯಿತು (೧೯೮೫) ಮಂಡ್ಯದ ಉತ್ಸವವೊಂದರಲ್ಲಿ ಕಥೆ ಮಾಡುತ್ತಿದ್ದಂತೆಯೇ ತೀವ್ರ ಮಿದುಳು ರಕ್ತಸ್ರಾವದಿಂದ ಕುಸಿದರು. ಮತ್ತೆ ಚೇತರಿಸಿಕೊಳ್ಳಲಿಲ್ಲ. ಆಗ ಅವರಿಗೆ ೫೧ ವರುಷ. ಸಾಯುವಂಥ ವಯಸ್ಸಲ್ಲ. ಇನ್ನು ಬಾಳಿ ಬದುಕಬೇಕಾದಂಥ ಪ್ರಾಯ. ಇನ್ನೂ ಒಂದು ಮೂವತ್ತು ವರುಷ ಕನ್ನಡ ತಾಯಿಗೆ ಅವರ ಸೇವೆ ಆಗಬೇಕಿತ್ತು.

ಇವರಿಗೆ ಸಂದ ಪ್ರಶಸ್ತಿಗೌರವಗಳು ಅಗಣಿತ. ಕೀರ್ತನ ಕೇಸರಿ, ಕೀರ್ತನ ಸಾಮ್ರಾಟ್, ಕೀರ್ತನ ಕಲಾವಿಚಕ್ಷಣ, ಕೀರ್ತನ ಕಲಾವತಂಸ, ಹರಿಕಥಾಕಲಾಭೂಷಣ ಒಂದೇ ಎರಡೇ ಲೆಕ್ಕವಿಲ್ಲದಷ್ಟು! ಅಖಿಲ ಕರ್ನಾಟಕ ಕೀರ್ತನ ಕಲಾಪರಿಷತ್ತಿನ ಕಾರ್ಯದರ್ಶಿಯಾಗಿ, ದಾಸವರೇಣ್ಣ ಪುರಂದರ ದಾಸರ ಆರಾಧನಾ ಸಮಿತಿಯ ಸಕ್ರಿಯ ಸದಸ್ಯರಾಗಿದ್ದು ಅವರು ಬದುಕಿರುವ ತನಕ ಹಂಪಿಯ ಪುರಂದರೋತ್ಸವದಲ್ಲಿ ತಮ್ಮ ಸೇವೆಯನ್ನು ತಪ್ಪಿಸಿದವರಲ್ಲ.

ಹೀಗೆ ಕೀರ್ತನ ರಂಗ, ರಂಗಭೂಮಿ, ಚಿತ್ರರಂಗ ಮೊದಲಾದ ಕ್ಷೇತ್ರಗಳಲ್ಲಿ ಸಾರ್ವಭೌಮರಾಗಿ ಕರ್ನಾಟಕವೇ ಅಲ್ಲದೆ ಹೊರನಾಡಿನಲ್ಲೂ ಕರ್ನಾಟಕ ಕೀರ್ತನಕಲಾ ವೈಭವವನ್ನು ಮೆರೆದ ಗುರುರಾಜುಲುನಾಯ್ಡು ಕೀರ್ತನಕ್ಷೇತ್ರದಲ್ಲಿ ಅಮರರಾಗಿದ್ದಾರೆ.



# ಸಂತ ಭದ್ರಗಿರಿ ಕೇಶವದಾಸರು

ಭದ್ರಗಿರಿ : ಭಾರತೀಯ ಸಂತ ವಾಙ್ಮಯದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡುವಂಥ ಇಬ್ಬರು ಮಹಾನ್‌ಸಂತರನ್ನು ನೀಡಿದ ಶ್ರೀಕ್ಷೇತ್ರ ಇದು. ಪಂಢರಾಪುರದಂತೆ ದಾಸವಾಙ್ಮಯದ ಸಂತರನ್ನು ನೀಡಿದ ಮಹಾನ್‌ಕ್ಷೇತ್ರ. ಅಲ್ಲಿನ ವಿಠಲನು ಇಲ್ಲಿ ವೀರವಿಠನಾಗಿದ್ದಾನೆ. ಅಲ್ಲಿನ ಭೀಮಾನದಿ ಇಲ್ಲಿ ಸುವರ್ಣ ನದಿ. ಈ ನದೀ ತಟಾಕದ ಕ್ಷೇತ್ರವೇ ಭದ್ರಗಿರಿ. ಸಂತ ಕೇಶವದಾಸರ ಹುಟ್ಟೂರು.

ಭದ್ರಗಿರಿಯ ಮಧ್ಯಮ ವರ್ಗದ ಕುಟುಂಬ. ವೆಂಕಟರಮಣ ಪೈ ಹಾಗೂ ರುಕ್ಮಿಣೀಬಾಯಿ ದಂಪತಿಗಳ ತೃತೀಯ ಪುತ್ರ ಕೇಶವ (ರಾಧಾಕೃಷ್ಣ). ನರಸಿಂಹ, ಅಚ್ಯುತ ಇವರಿಗಿಂತ ಹಿರಿಯರು. ವೆಂಕಟರಮಣ ಪೈ ಹೆಸರೇ ಹೇಳುವಂತೆ ಗೌಡ ಸಾರಸ್ವತ ಬ್ರಾಹ್ಮಣ ವರ್ಗಕ್ಕೆ ಸೇರಿದವರು. ಮೂಲ್ಕಿಯ ಶ್ರೀ ನೃಸಿಂಹದೇವರ ಆದೇಶದಂತೆ ಹತ್ತಿರದ ಸಂತೆ ಕಟ್ಟೆಯಿಂದ ಭದ್ರಗಿರಿಗೆ ವಲಸೆ ಬಂದವರು. ೧೯೩೪ರ ಭಾವನಾಮ ಸಂವತ್ಸರ ಆಷಾಢ ಶುದ್ಧ ಏಕಾದಶಿಯಂದು ಜನಿಸಿದ ಮಗುವಿಗೆ ರಾಧಾಕೃಷ್ಣ ಪೈ ಎಂದು ನಾಮಕರಣ ಮಾಡಿದರು ತಂದೆ ತಾಯಿಗಳು. ಮಗುವಿನ ರಾಶಿಕುಂಡಲಿಯನ್ನು ಬರೆದ ಜೋಯಿಸರು ವೆಂಕಟರಮಣ ಪೈ ದಂಪತಿಗಳನ್ನು ಕರೆದು ಆನಂದದಿಂದ ಜಾತಕ ತೋರಿಸುತ್ತ ಇಂಥ ಕುಂಡಲಿಯನ್ನು ತಾವು ಕಂಡದ್ದೇ ಇಲ್ಲ. ಈತ ದೈವಾಂಶ ಸಂಭೂತ. ಜಗತ್ತಿನಾದ್ಯಂತ ಹರಿಭಕ್ತಿ ಮಹಿಮೆಯನ್ನು ಸಾರುತ್ತಾ ವಿಶ್ವವಿಖ್ಯಾತ ನಾಗುತ್ತಾನೆ ಎಂದು ಅಂದೇ ಭವಿಷ್ಯ ನುಡಿದರು. ಆ ಭವಿಷ್ಯ ಸುಳ್ಳಾಗಲಿಲ್ಲ. ವಕೀಲಿ ವೃತ್ತಿಯನ್ನು ಹಿಡಿದು ನ್ಯಾಯವಾದಿಯಾಗಬೇಕೆಂಬ ಉತ್ಕಟಾಂಕ್ಷೆಯನ್ನು ಹೊಂದಿದ್ದ ಹುಡುಗ ದಾಸಪಂಥ ಹಿಡಿದ. ಕೀರ್ತನ ಕಲೆಯಲ್ಲಿ ನಿಷ್ಣಾತನಾಗಿ, ವಿಶ್ವವಿಖ್ಯಾತ ಶಾಂತಿದೂತನಾಗಿ ಭಾರತೀಯ ಭವ್ಯ ಪರಂಪರೆಯ ರಾಯಭಾರಿಯಾಗಿ ಲೋಕಕ್ಕೇ ಮಾರ್ಗದರ್ಶನ ನೀಡಿದ ಮಹಾನ್ ಸಂತನೆನಿಸಿದ. ಜನ್ಮನಾಮ ರಾಧಾಕೃಷ್ಣನಾದರೂ ರೂಢಿನಾಮದಲ್ಲಿ ಕೇಶವನಾದದ್ದೂ ಒಂದು ವಿಚಿತ್ರವೇ.

## ಕೇಶವ-ಮಾಧವ

ವೆಂಕಟರಮಣ ಪೈಗಳವರ ನೆರೆಯಲ್ಲಿದ್ದವರು ರಾಧಾಕೃಷ್ಣಪೈ ಹಾಗೂ ಯಮುನಾಬಾಯಿ ದಂಪತಿಗಳು. ವಿವಾಹಿತರಾಗಿ ಹಲವಾರು ವರ್ಷಗಳು ಉರುಳಿದ್ದರೂ ಅವರಿಗೆ ಸಂತಾನ ಭಾಗ್ಯ ಒದಗಿ ಬಂದಿರಲಿಲ್ಲ. ರುಕ್ಮಿಣಮ್ಮನ ಆತ್ಮೀಯ ಗೆಳತಿಯಾಗಿದ್ದ ಯಮುನಾಬಾಯಿ ಅವರ ಎಳೆಯ ಮಕ್ಕಳಾದ ಅಚ್ಯುತ-ರಾಧಾಕೃಷ್ಣರನ್ನು ತಮ್ಮ ಮಕ್ಕಳಂತೆಯೇ ಕಂಡು ಮನೆಗೆ ಕರೆದೊಯ್ದು ತಿಂಡಿ-ತಿನಿಸುಗಳನ್ನು ಕೊಟ್ಟು, ಕೃಷ್ಣನನ್ನು ಸಲಹಿದ ಯಶೋದೆಯಂತೆ ಪ್ರೀತಿ ವಾತ್ಸಲ್ಯ ತೋರಿಸುತ್ತಿದ್ದರು. ಈಕೆಯ ಭಾವನ ಹೆಸರೂ ಅಚ್ಯುತ ಎಂದು.

ಈ ಮಕ್ಕಳಿಬ್ಬರನ್ನೂ ಭಾವ ಹಾಗೂ ಗಂಡನ ಹೆಸರಿನಿಂದ ಕೂಗುವುದು ಆಕೆಗೆ ಕಷ್ಟವೆನಿಸಿತು. ಹಾಗಾಗಿ ಅಚ್ಯುತನನ್ನು 'ಮಾಧವ'ನೆಂದೂ, ರಾಧಾಕೃಷ್ಣನನ್ನು 'ಕೇಶವ'ನೆಂದೂ ಕರೆಯುತ್ತಿದ್ದರು. ಇದೇ ಹೆಸರು ರೂಢಿಯಾಗಿ ರಾಧಾಕೃಷ್ಣ 'ಕೇಶವ' ನಾಗಿ ಎಲ್ಲರ ಬಾಯಲ್ಲೂ ನಲಿದಾಡಿದ. ಶಾಲೆಗೆ ಸೇರಿಸುವಾಗಲೂ ಇದೇ ಹೆಸರಿನಿಂದ ನೋಂದಾಯಿಸಿ ರಾಧಾಕೃಷ್ಣನೆಂಬ ಹೆಸರು ಮರೆಯಾಗಿ 'ಕೇಶವ' ನೆಂಬ ಹೆಸರೇ ಸ್ಥಿರವಾಯಿತು. ಆದರೆ ಅಚ್ಯುತ ಮಾಧವನಾಗದೇ 'ಅಚ್ಯುತ' ನಾಗೇ ಉಳಿದ. ಮುಂದೆ ಇವರಿಗೆ ಸರ್ವೋತ್ತಮ, ವಿಠಲ ಎಂಬ ಇಬ್ಬರು ತಮ್ಮಂದಿರೂ, ಪ್ರೇಮಾಬಾಯಿ ಎಂಬ ತಂಗಿಯೂ ದೊರೆತರು. ಹೆಸರಿಗೆ ತಕ್ಕಂತೆ ಕೇಶವ ಬಾಲಕೃಷ್ಣನಾಗಿ ಭದ್ರಗಿರಿಯ ಎಲ್ಲರ ಮನೆ ಮಗುವಾಗಿ ಕೃಷ್ಣನಂತೇ ತನ್ನ ಬಾಲಲೀಲೆಯಿಂದ ಅವರನ್ನು ನಲಿಸುತ್ತಾ ಎಲ್ಲರ ಪ್ರೇಮಪುತ್ಥಳಿಯಾಗಿ ಬೆಳೆದ.

ಮುಂದೆ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪೈಗಳು ಉಡುಪಿಗೆ ವಲಸೆ ಬಂದು ಅಲ್ಲಿ ಮಕ್ಕಳನ್ನು ಶಾಲೆಗೆ ಸೇರಿಸಿದರು. ಜೊತೆ ಜೊತೆಯಲ್ಲೇ ಸಂಗೀತ -ಯಕ್ಷಗಾನ ಕಲೆಯ ಶಿಕ್ಷಣವೂ ದೊರೆತು ಗಾಯನ-ಅಭಿನಯಗಳಲ್ಲಿ ಅಣ್ಣ-ತಮ್ಮ ನಿಷ್ಣಾತರಾದರು. ಹಿರಿಯಣ್ಣ ನರಸಿಂಹ ಪೈ ಸಂಗೀತ ಕಲಿಯುವಾಗ ಆಸಕ್ತಿಯಿಂದ ಕುಳಿತು ಕೇಳಿ ಅದನ್ನು ಮನಸ್ಸಿನಲ್ಲಿ ತುಂಬಿ ಕೊಳ್ಳುತ್ತಿದ್ದರು. ಹಾರ್ಮೋನಿಯಂ, ತಬಲಾ ವಾದನಗಳನ್ನು ಕಲಿತು ಅದರಲ್ಲೂ ಪರಿಣತಿ ಗಳಿಸಿದರು.

## ತಾಯಿಯೇ ಪ್ರಥಮ ಗುರು

''ಮಕ್ಕಳ ಸ್ಕೂಲ್ ಮನೇಲಲ್ವೇ'' ಎಂಬ ಕೈಲಾಸಂ ನುಡಿ ಇವರ ಮನೆಯಲ್ಲಿ ಅಕ್ಷರಶಃ ನಿಜವೆನಿಸಿತು. ತಾಯಿ ರುಕ್ಮಿಣಮ್ಮ ಸಂಜೆ ಹೊತ್ತುಗಳೆದ

ನಂತರ ಮಕ್ಕಳನ್ನೆಲ್ಲ ಒಟ್ಟು ಸೇರಿಸಿ ಭಜನೆ ಹಾಡಿಸುವರು. ಸಾಧು ಸಂತರ ಕಥೆಗಳನ್ನು ಹೇಳುತ್ತಿದ್ದರು. ಅದರಲ್ಲಿ ಸಂತಜ್ಞಾನೇಶ್ವರ, ದಾಸಶ್ರೇಷ್ಠ ಪುರಂದರ ದಾಸರ ಚರಿತ್ರೆಗಳು ಈ ಹುಡುಗರ ಮೇಲೆ ಸಾಕಷ್ಟು ಪರಿಣಾಮ ಬೀರಿದರೂ ಕೇಶವನ ಮೇಲೆ ವಿಶೇಷ ಪ್ರಭಾವ ಬೀರಿತು. ಅವರ ಧ್ಯೇಯೋದ್ದೇಶಗಳನ್ನು ತಮ್ಮ ಜೀವನದುದ್ದಕ್ಕೂ ಅನುಷ್ಠಾನಿಸಿ ಅವರಂತೆ ತಾನೂ ಮಹಾನ್ ದಾರ್ಶನಿಕನಾಗಬೇಕೆಂಬ ಕನಸನ್ನು ಅಂದೇ ಕಂಡರು. ಅದು ಕೇವಲ ಕನಸಾಗೇ ಉಳಿಯದೇ ನನಸಾಗಿ ಅವರ ಜೀವನದ ಹಾಸುಹೊಕ್ಕಾಯಿತು. ತಾಯಿಯ ಬಾಯಿಂದ ಹೊರಹೊಮ್ಮುತ್ತಿದ್ದ ದಾಸ ಕೀರ್ತನೆಗಳು, ಸಂತರ ಅಭಂಗಗಳೂ ಹುಡುಗನಿಗೆ ಕಂಠಪಾಠವಾಯಿತು. ಮುಂದೆ ಅಣ್ಣ ಅಚ್ಯುತನೊಂದಿಗೆ ಶಾಲೆಗೆ ಸೇರಿದ ಕೇಶವನಿಗೆ ಅಲ್ಲಿಯ ಅಧ್ಯಾಪಕಿ ನಾಗವೇಣಮ್ಮನೇ ಕೀರ್ತನ ಕಲೆಯ ಪ್ರಥಮ ಗುರುವಾದರು.

## ಮೊದಲ ಕಥೆ

ಬಾಲಕ ಕೇಶವನ ಬಾಯಿಂದ ದಾಸಕೃತಿ-ಅಭಂಗಗಳನ್ನು ಕೇಳಿದ್ದ ನಾಗವೇಣಮ್ಮ ಕೀರ್ತನ ಕ್ಷೇತ್ರದಲ್ಲಿ ಈ ಹುಡುಗನಿಗೆ ಉಜ್ವಲ ಭವಿಷ್ಯವಿದೆ ಎಂದು ಮನಗಂಡು ಆತನಿಗೆ ಒಂದು ಪ್ರಸಂಗವನ್ನು ಕಂಠಪಾಠ ಮಾಡಿಸಿ ಶಾಲೆಯಲ್ಲೇ ಕಥೆ ಮಾಡಿಸಿದರು.

ಅಂದು ಕೇಶವನ ಉತ್ಸಾಹ ಹೇಳತೀರದು. ನಾಗವೇಣಮ್ಮ ಹುಡುಗನಿಗೆ ಕಚ್ಚೆಪಂಚೆ ಉಡಿಸಿ, ಶಲ್ಯ ಹೊದಿಸಿ, ದ್ವಾದಶ ನಾಮಗಳನ್ನು ತಿದ್ದಿ ಹಣೆಗೆ ತಿಲಕವಿಟ್ಟು ಕೈಗೆ ತಾಳ-ಚಿಟಿಕೆಗಳನ್ನು ಕೊಟ್ಟು ಸಭೆಗೆ ಕರೆತಂದರು. ತಾಯಿ ರುಕ್ಮಿಣಮ್ಮ ತಂದೆ ವೆಂಕಟರಮಣ ಪೈ ಮಗನನ್ನು ಹೃದಯ ತುಂಬಿ ಹರಸಿದರು. ಯಾವ ಅಳುಕೂ, ಸಭಾ ಕಂಪನವೂ ಇಲ್ಲದೆ ಒಬ್ಬ ಅನುಭವೀ ಕೀರ್ತನಕಾರನಂತೆ ತುಂಬು ಆತ್ಮವಿಶ್ವಾಸದಿಂದ ಗುರು ಹೇಳಿಕೊಟ್ಟ 'ಇಂದ್ರಸೇನಾರಾಜ'ನ ಕಥೆಯನ್ನು ಯಥಾವತ್ತಾಗಿ ನಿರೂಪಿಸಿದ ಬಾಲಕನ ಪ್ರೌಢಿಮೆಯನ್ನು ಕಂಡು ಎಲ್ಲರೂ ಹೊಗಳಿದರು, ಹರಸಿದರು. ದೃಷ್ಟಿಯಾದೀ ತೆಂದು ದೃಷ್ಟಿ ನಿವಾಳಿಸಿದರು. ಹೀಗೆ 'ಬಾಲ ಹರಿದಾಸ'ನಾದ ಹುಡುಗ ಕೇಶವ.

ಭದ್ರಗಿರಿಯ ಶಾಲೆಗೆ ಅಧಿಕಾರಿಗಳು ಬರುವ ದಿನ ಕೇಶವನಿಂದ 'ಭದ್ರಾಚಲ ರಾಮದಾಸ್' ನಾಟಕವನ್ನಾಡಿಸಿದಾಗ 'ರಾಮದಾಸ' ನಾಗಿ ಕೇಶವನ ಭಕ್ತಿಯುತ ಪಾತ್ರವನ್ನು ಅಧಿಕಾರಿಗಳು ಮೆಚ್ಚಿಕೊಂಡದ್ದೇ ಅಲ್ಲದೆ ಕಲೆ ಈತನ ನರನಾಡಿಗಳಲ್ಲೂ ಹರಿಯುತ್ತಿದೆ. ಈತನಿಗೆ ಉಜ್ವಲ ಭವಿಷ್ಯವಿದೆ ಎಂದು ತಮ್ಮ ಪ್ರಶಂಸೆ ವ್ಯಕ್ತ ಪಡಿಸಿದರು. ನಾಟಕ, ಯಕ್ಷಗಾನ, ಕಲೆಗಳಿಗಾಗಿ

ಅಭ್ಯಸಿಸುತ್ತಿದ್ದ ಭಾರತ, ರಾಮಾಯಣ, ಭಾಗವತಾದಿ ಕಥಾವಸ್ತುಗಳು ಕೇಶವನಿಗೆ ಕರಗತವಾಯಿತು. ಆಗಾಗ್ಗೆ ಅಲ್ಲಲ್ಲಿ ನಡೆಯುತ್ತಿದ್ದ ಶಂಕರನಾರಾಯಣ ಸಾಮಗ, ಉಪ್ಪೂರು ವೈಕುಂಠದಾಸರು, ಹಂಡೆ ಶ್ರೀಪಾದದಾಸರು, ಮಾಧವ ಬೋವಿಗಳು ಮಾಡುತ್ತಿದ್ದ ಹರಿಕಥೆಗಳನ್ನು ಕೇಳಿ ಸಾಕಷ್ಟು ಪ್ರಭಾವಿತನಾಗಿ ಕೀರ್ತನ ಕಲೆಯ ಬಗ್ಗೆ ವಿಶೇಷ ಆಸಕ್ತಿ ಹೊಂದಿದ. ಕೀರ್ತನ ಕಲೆಯನ್ನೂ ಅಭ್ಯಸಿಸಿದ ತನಗೆ ತಿಳಿದಂತೆ. ಆದರೂ ಸೂಕ್ತ ಗುರು ಮುಖೇನ ಈ ಕಲೆಯನ್ನು ವಿಧ್ಯುಕ್ತವಾಗಿ ಕಲಿಯಬೇಕೆಂಬ ಹಂಬಲ ಹುಡುಗನಲ್ಲಿತ್ತು.

## ಕಲಿಸಲು ಹುಟ್ಟಿದವನು

ಹುಡುಗನ ಕೀರ್ತನ ಕಲಾ ಸಾಮರ್ಥ್ಯವನ್ನು ಕಂಡುಕೊಂಡವರಲ್ಲಿ ಬಾರ್ಕೂರಿನ ರಾಮಕೃಷ್ಣ ಅವಧಾನಿ ಹಾಗೂ ಭದ್ರಗಿರಿಯ ಮಂಜುನಾಥ ಕಾಮತ್ ಅಲ್ಲದೆ ಹಿರಿಯ ಭಾವ ವಾಮನ ಗಡಿಯಾರ್ ಪ್ರಮುಖರು. ಭಾವ ಗಡಿಯಾರ್‌ರವರು ಕೀರ್ತನಕಾರರು ಧರಿಸುವಂಥ ಪೋಷಾಕುಗಳನ್ನು ಹೊಲಿಸಿಕೊಟ್ಟಿದ್ದರು. ಆಗಿನ ಕಾಲಕ್ಕೆ ಸಂಜೀವರಾಯರು ಕೀರ್ತನ ಕಲೆಯ ಭೀಷ್ಮರೆನಿಸಿದ್ದವರು. ಅವರ ಬಳಿ ಕೇಶವನಿಗೆ ಶಿಕ್ಷಣ ದೊರೆತರೆ ಹುಡುಗ ಪುಟಕ್ಕಿಟ್ಟ ಚಿನ್ನದಂತಾಗುವ ಎಂದು ಈ ವಿಷಯವನ್ನು ಮಂಜುನಾಥ ಕಾಮತರು ಅವರ ಬಳಿ ಪ್ರಸ್ತಾಪಿಸಿದಾಗ ರಾಯರು ತಮ್ಮ ಮನೆಯಲ್ಲಿಯೇ ಹುಡುಗನ ಕಥೆ ಏರ್ಪಡಿಸುವಂತೆ ತಿಳಿಸಿದರು. ಹುಡುಗ ಕೇಶವ ಎಂದಿನಂತೆ ಯಾವ ಅಳುಕೂ ಇಲ್ಲದೆ ಸುಮಾರು ಎರಡು ಗಂಟೆಗಳ ಕಾಲ ಹರಿಕೀರ್ತನೆ ನಡೆಸಿ ಮಂಗಳ ಹಾಡಿದಾಗ ಸಂಜೀವರಾಯರು ಆನಂದಾಶ್ರು ಸುರಿಸುತ್ತಿದ್ದರು. ಕಾಮತರು ಮೂಕರಾಗಿದ್ದರು. ಶ್ರೋತೃಗಳು ಆ ಭಾವೋನ್ಮಾದದಿಂದ ಇನ್ನೂ ಹೊರಬಂದಿರಲಿಲ್ಲ.

ಭಾವುಕರಾದ ಸಂಜೀವರಾಯರು ''ಈ ಹುಡುಗ ಕಲಿಯಲು ಹುಟ್ಟಿಲ್ಲ ಕಲಿಸಲು ಹುಟ್ಟಿದವನು. ಇವನಿಗೆ ಯಾರ ಉಪದೇಶವೂ ಬೇಕಿಲ್ಲ. ಸಾಕ್ಷಾತ್ ಪಾಂಡುರಂಗನೇ ಇವನ ನಾಲಿಗೆಯಲ್ಲಿ ನರ್ತಿಸುತ್ತಿದ್ದಾನೆ ಎಂದ ಮೇಲೆ ನಾವು ಹೇಳುವುದೇನಿದೆ? ಭಗವದನುಗ್ರಹ ಈ ಬಾಲಕನಲ್ಲಿ ವಿಶೇಷವಾಗಿದೆ. ನನಗೆ ನಮ್ಮ ಗುರುವರ್ಯರಾದ ಶಿರಾಲಿಯ ಚಿತ್ರಾಪುರ ಮಠದ ಶ್ರೀ ಶ್ರೀ ಆನಂದಾಶ್ರಮ ಸ್ವಾಮೀಜಿಯವರಿಂದ ಆಶೀರ್ವಾದರೂಪಿಯಾಗಿ ಕೊಡಲ್ಪಟ್ಟ ಶಾಲನ್ನು ಈ ಹುಡುಗ ಬದ್ರಗಿರಿ ಕೇಶವ ಪೈಗೆ ಪ್ರೀತಿಯಿಂದ ಹರಸಿ ಹೊದಿಸುತ್ತಿದ್ದೇನೆ'' ಎಂದು ಹರಸಿ ಶಲ್ಯ ಹೊದಿಸಿದರು. ಸರಿ! ಅಂದೇ ಹುಡುಗ ಕೇಶವನಿಗೆ ಗುರ್ವಾನುಗ್ರಹವೂ ಆಯಿತು. ವಿದ್ಯಾದಾಹ ಹೊಂದಿದ್ದ

ಕೇಶವನಿಗೆ ಕಲ್ಯಾಣಪುರದ ಶೇಷಗಿರಿ ಮಲ್ಯ ಎಂಬುವರು ವಿದ್ಯಾಭ್ಯಾಸಕ್ಕಾಗಿ ವಿಶೇಷ ನೆರವು ನೀಡಿದರು. ಕೇವಲ ಕೀರ್ತನ ಕಲೆಯೇ ಅಲ್ಲದೆ ಲೌಕಿಕ ವಿದ್ಯಾಭ್ಯಾಸದಲ್ಲೂ ಮುಂದಿದ್ದು ಕೇಶವ ಕ್ರಮೇಣ ಮೆಟ್ರಿಕ್ಯುಲೇಶನ್ ಪರೀಕ್ಷೆಗೂ ಕಟ್ಟಿ ಉತ್ತೀರ್ಣನಾದ. ಪದವೀಧರನಾಗುವ ಕನಸನ್ನೂ ಕಂಡ.

ಅಣ್ಣ ಅಚ್ಯುತ ಪೈ ಭದ್ರಗಿರಿಯಲ್ಲೇ ಓದು ಮುಗಿಸಿ ಸದಾ ಪಾರಮಾರ್ಥ ಚಿಂತನೆಯಲ್ಲಿಯೇ ಅಪಾರವಾದ ಜ್ಞಾನ ಭಂಡಾರ ಬೆಳೆಸಿ ಕೊಂಡು ಸ್ವಾಧ್ಯಾಯ ನಿರತರಾಗಿದ್ದರು. ಸುತ್ತಮುತ್ತಲ ಹಳ್ಳಿ ಊರುಗಳಲ್ಲಿ ಇವರ ಕಥೆ-ಕೀರ್ತನೆಗಳು ನಡೆಯುತ್ತಿದ್ದು ಭದ್ರಗಿರಿ ಸಹೋದರರ ಕೀರ್ತಿ ಎಲ್ಲೆಡೆ ಹಬ್ಬಿತ್ತು.

ಪದವೀಧರನಾಗುವ ಕನಸು ಕಾಣುತ್ತಿದ್ದ ಕೇಶವ ಅಭೀಷ್ಠ ನೆರವೇರುವ ಸಮಯ ಸಹ ಬಂತು. ಮಣಿಪಾಲದಲ್ಲಿ ಡಾ|| ಟಿ. ಮಾಧವ ಪೈಯವರು ಸ್ಥಾಪಿಸಿದ ಮಹಾತ್ಮಾ ಗಾಂಧಿ ಸ್ಮಾರಕ ಮಹಾವಿದ್ಯಾಲಯದಲ್ಲಿ ಕೇಶವನಿಗೆ ಪ್ರವೇಶ ದೊರೆಯಿತು. ಈ ಹೊತ್ತಿಗಾಗಲೇ ಶ್ರೀ ಕಾಶೀಮಠ ಸಂಸ್ಥಾನದ ಮಠಾಧೀಶರಾದ ಶ್ರೀ ಶ್ರೀ ಸುಧೀಂದ್ರ ತೀರ್ಥರು ಹಾಗೂ ಉಡುಪಿ ಭಂಡಾರಕೇರಿ ಮಠದ ಪೀಠಸ್ಥರಾದ ಶ್ರೀ ಶ್ರೀ ವಿದ್ಯಾಮಾನ್ಯ ತೀರ್ಥರ ಸಮ್ಮುಖದಲ್ಲಿ ಕೀರ್ತನ ನಡೆಸಿ ಅವರುಗಳ ಅನುಗ್ರಹಕ್ಕೆ ಪಾತ್ರರಾಗಿದ್ದರು. ಪೈಗಳವರಿಗೂ ಈ ವಿಷಯ ತಿಳಿದಿದ್ದು ಕೇಶವನಂಥ ವಿದ್ಯಾರ್ಥಿ ತಮ್ಮ ವಿದ್ಯಾಲಯದಲ್ಲಿರುವುದು ಸಂಸ್ಥೆಗೇ ಗೌರವ ತರುವಂಥದ್ದೆಂದು ಮನಗಂಡಿದ್ದರು. ಸಹಪಾಠಿಗಳೂ ಸಹ ಕೇಶವನ ಸ್ನೇಹ ಸನಿಹಕ್ಕಾಗಿ ಹಾತೊರೆಯುತ್ತಿದ್ದರು. ಹೀಗೆ ಪ್ರಥಮ ವರ್ಷದ ಇಂಟರ್‌ಮೀಡಿಯಟ್ ಪರೀಕ್ಷೆ ಮುಗಿಸಿ ಬೇಸಿಗೆ ರಜೆಯಲ್ಲಿ ಪ್ರವಾಸ ಹೊರಟು ಕೀರ್ತನ ಕಲೆಯನ್ನೇ ಮಾಧ್ಯಮವಾಗಿಟ್ಟುಕೊಂಡು ಮುಂದಿನ ವಿದ್ಯಾಭ್ಯಾಸಕ್ಕೆ ಧನಾರ್ಜನೆಗಾಗಿ ಹೊರಟರು. ಕೇವಲ ದಕ್ಷಿಣ ಕನ್ನಡ ಜಿಲ್ಲೆಯೇ ಅಲ್ಲದೆ ಹತ್ತಿರದ ಕೊಡಗು, ಮೈಸೂರು, ಬೆಂಗಳೂರುಗಳಲ್ಲೂ ಪ್ರವಾಸ ಮಾಡಿದರು. ಕೊಡಗಿನ ಮಡಿಕೇರಿಯಲ್ಲಿ ಹೋಟೆಲ್ ಉದ್ಯಮಿಗಳು ಹೆಚ್ಚಿನಂಶ ಗೌಡ ಸಾರಸ್ವತ ಬ್ರಾಹ್ಮಣರೇ ಆದ್ದರಿಂದ ಅಲ್ಲಿ ಇವರಿಗೆ ಹೆಚ್ಚಿನ ಪ್ರಚಾರ ಹಾಗೂ ಸಾಕಷ್ಟು ಆರ್ಥಿಕ ಸಹಾಯವೂ ದೊರೆಯಿತು.

## ಗೃಹಸ್ಥಾಶ್ರಮ ಧರ್ಮ

ಹೀಗೆ ಪ್ರವಾಸ ಕಾರ್ಯದಲ್ಲಿದ್ದಾಗಲೇ ಅವರಿಗೆ ಕಂಕಣಬಲವೂ ಕೂಡಿಬಂತು. ಕೇರಳದ ಹೊಸದುರ್ಗದ ಸುಶೀಲಾಬಾಯಿ ಎಂಬುವರ

ಮನೆಯಲ್ಲಿ ರಾಮನವಮಿ ಉತ್ಸವದ ಅಂಗವಾಗಿ ರಾಮಾವತಾರದ ಕಥೆ ಏರ್ಪಾಡಾಗಿತ್ತು. ಈ ಕಥೆಗೆ ಅಲ್ಲಿನ ಆನಂದಿ ಬಾಯಿ ಹಾಗೂ ವಿಠಲ ಪೈಯವರ ಮೊಮ್ಮಗ ಮಾಧವ ಶೆಣೈ ಅವರೊಂದಿಗೆ ಸಹೋದರಿ ನಿರ್ಮಲ ಸಹ ಬಂದಿದ್ದರು. ಕೇಶವ ಪೈಯವರು ಕಥೆ ಮಾಡುವ ರೀತಿ, ಸಂಗೀತ ಜ್ಞಾನ, ಮಾತಿನ ವಾಗ್ಝರಿಗಳ ಮೋಡಿಗೆ ಸಿಲುಕಿದ ನಿರ್ಮಲ ಅವರಲ್ಲಿ ಅನುರಕ್ತರಾದರು. ಕಾಲಕ್ರಮದಲ್ಲಿ ಕಂಕಣಬಲ ಕೂಡಿ ಬಂದು ಎರಡೂ ಕುಟುಂಬದ ಹಿರಿಯರು ಕೂಡಿ ಮಾತುಕತೆ ನಡೆಸಿ ಕೇಶವ-ನಿರ್ಮಲರ ವಿವಾಹ ನಡೆಸಿಯೇ ಬಿಟ್ಟಿರು. ಆ ನಿರ್ಮಲಳೇ ಕೇಶವ ಪೈಯ ಗೃಹಿಣಿಯಾಗಿ 'ರಮಾಬಾಯಿ' ಎಂಬ ಅಭಿದಾನ ಹೊಂದಿ ಇಂದು ಎಲ್ಲ ಭಕ್ತರ ಬಾಯಲ್ಲೂ ರಮಾ ಮಾತೆಯಾಗಿ ವಿಜೃಂಭಿಸುತ್ತಿದ್ದಾರೆ.

## 'ಕೀರ್ತನ ಕೇಸರಿ'

ಪ್ರಥಮ ವರ್ಷದ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾದರು ಕೇಶವ ಪೈ. ಇದೇ ಸಂದರ್ಭದಲ್ಲಿ 'ಗೀತಾ ಜಯಂತಿ'ಯ ಅಂಗವಾಗಿ ಉಡುಪಿಯ ಪ್ರತಿಷ್ಠಿತ ಹಾಗೂ ಪ್ರಭಾವಯುತ ವ್ಯಕ್ತಿಯಾಗಿದ್ದ ಶ್ರೀ ಟಿ. ಉಪೇಂದ್ರ ಪೈಯವರು ಮಣಿಪಾಲದ ತಮ್ಮ ಗೀತಾಮಂದಿರಕ್ಕೆ ಕಾಶೀಮಠಾಧೀಶರಾದ ಶ್ರೀ ಸುಧೀಂದ್ರತೀರ್ಥ ಸ್ವಾಮೀಜಿಯವರನ್ನು ಬರಮಾಡಿಕೊಂಡಿದ್ದರು. ಅವರ ಸನ್ನಿಧಿಯಲ್ಲಿ ಕೇಶವ ಪೈಯವರ ಕೀರ್ತನ ಏರ್ಪಡಿಸಲಾಗಿತ್ತು. ಈಗಾಗಲೇ ಶ್ರೀಗಳವರ ಅನುಗ್ರಹಕ್ಕೆ ಪಾತ್ರರಾಗಿದ್ದ ಕೇಶವ ಪೈಯವರ ಕೀರ್ತನೆ ಕೇಳಿ ಮೆಚ್ಚಿಕೊಂಡ ಶ್ರೀಗಳವರು ಮಠ ಮರ್ಯಾದೆಯೊಂದಿಗೆ ''ಕೀರ್ತನ ಕೇಸರಿ'' ಎಂಬ ಬಿರುದು ನೀಡಿ ಸನ್ಮಾನಿಸಿದರು. ಹೀಗೆ ಕೀರ್ತಿಯ ಮೆಟ್ಟಿಲನ್ನು ಹಂತ ಹಂತವಾಗಿ ಏರುತ್ತಾ ಕೀರ್ತನ ಮಾಧ್ಯಮದಿಂದಲೇ ತಮ್ಮ ಪದವಿ ಪರೀಕ್ಷೆ ಮುಗಿಸಿ ಕಾನೂನು ಶಾಸ್ತ್ರ ಪದವಿಯನ್ನು ಪಡೆಯಲು ಉಡುಪಿಯಲ್ಲಿ ಆಗತಾನೆ ಪ್ರಾರಂಭವಾದ 'ಲಾ' ಕಾಲೇಜಿಗೆ ಸೇರಿದರು.

ಬಿ.ಎ. ಮುಗಿಸಿ ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆಯುವ ಆಸೆ ಹೊತ್ತಿದ್ದವರು ಕೇಶವ ಪೈ. ವಾರಣಾಸಿಯ ವಿಶ್ವವಿದ್ಯಾಲಯದಲ್ಲಿ ಪ್ರವೇಶವೂ ದೊರೆತಿತ್ತು. ಆದರೆ ವೃದ್ಧರಾದ ವೆಂಕಟರಮಣ ಪೈ ದಂಪತಿಗಳು ಮಗನನ್ನು ಅಷ್ಟು ದೂರ ಕಳುಹಿಸಲು ಸಿದ್ಧರಿರಲಿಲ್ಲ. ಹಾಗಾಗಿ ಹಿರಿಯರ ಆದೇಶದಂತೆ ತಮ್ಮ ಆಸೆ-ಆಕಾಂಕ್ಷೆಗಳನ್ನು ಹತ್ತಿಕ್ಕಿ ಕಾನೂನು ಶಾಸ್ತ್ರಕ್ಕೆ ಮೊರೆಹೊಕ್ಕರು. ಕಾಲೇಜು ತೆರೆಯಲು ಸಾಕಷ್ಟು ಅವಧಿ ಇದ್ದುದರಿಂದ ಮುಂದೆ ಮುಂಬೈ ಪ್ರವಾಸ ಕೈಕೊಂಡರು. ಈ ಹೊತ್ತಿಗಾಗಲೇ ಮುಂಬೈಗೆ

ವಲಸೆ ಹೋಗಿದ್ದ ಸ್ಥಳೀಕರಿಂದ ಇವರ ಪ್ರತಿಭೆ ಕೇಳಿ ತಿಳಿದಿದ್ದವರು ಪೈಯವರನ್ನು ಆದರದಿಂದ ಬರಮಾಡಿಕೊಂಡು ಅಲ್ಲಿಯೂ ಅನೇಕ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ಸಾಕಷ್ಟು ಧನಸಂಪಾದನೆಯೂ ಆಯಿತು. ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಯಿತು. ಹೀಗೆ ಹರಿಕಥೆಯ ಸಂಪಾದನೆಯಿಂದಲೇ ಕಾನೂನು ಪದವಿಯ ಕೊನೆಯ ವರ್ಷಕ್ಕೆ ತಲುಪಿದರು ಕೇಶವ ಪೈ. ಇದೇ ಸಂದರ್ಭದಲ್ಲಿ ಅವರಿಗೆ ಪಿತೃವಿಯೋಗವಾಗಿ ತಂದೆ ವೆಂಕಟರಮಣ ಪೈಯವರು ಕೊನೆಯುಸಿರೆಳೆದರು.

## ಕರ್ನಾಟಕದ ರಾಜಧಾನಿ ಬೆಂಗಳೂರಿಗೆ

ಕೀರ್ತನ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿದ ಭದ್ರಗಿರಿ ಸಹೋದರರು ಈಗ ಅಚ್ಯುತದಾಸ್, ಕೇಶವದಾಸರಾಗಿ ಪ್ರಸಿದ್ಧಿ ಹೊಂದಿದ್ದರು. ಕೇಶವದಾಸರ ಪ್ರತಿಭೆಯನ್ನು ಕೇಳಿದ ಬೆಂಗಳೂರು ಆಕಾಶವಾಣಿ ಕೇಂದ್ರ ಕಥಾ ಕೀರ್ತನ ಕಾರ್ಯಕ್ರಮದ ಪ್ರಸಾರಕ್ಕಾಗಿ ಇವರಿಗೆ ಆಹ್ವಾನ ನೀಡಿ ಮೂರು ತಿಂಗಳಿಗೊಮ್ಮೆ ಕಾರ್ಯಕ್ರಮ ನೀಡವಂತೆ ಕರಾರು ಮಾಡಿಕೊಂಡಿತು. ಇದರಿಂದ ರಾಜ್ಯದ ನಾನಾ ಭಾಗದಿಂದ ಎಲ್ಲೆಡೆ ಇವರ ಕಥಾಕೀರ್ತನ ಶ್ರವಣಿಸುವ ಸುಯೋಗ ಜನರಿಗೆ ಸಂದಿತು. ಬೆಂಗಳೂರಿನ ಅನೇಕ ಸಂಸ್ಥೆಗಳು ಇವರ ಕಾರ್ಯಕ್ರಮಗಳನ್ನೇರ್ಪಡಿಸಿದವು. ಅಲ್ಲದೆ ತಾವು ಕಾನೂನು ಪದವೀಧರರಾದ ಮೇಲೆ ಬೆಂಗಳೂರಿನಲ್ಲೇ 'ಪ್ರಾಕ್ಟೀಸ್' ಮಾಡುವ ಇರಾದೆಯಿಂದಿದ್ದ ದಾಸರು ಬೆಂಗಳೂರಿಗೆ ವಲಸೆ ಬಂದರು. ಅಣ್ಣ ಅಚ್ಯುತದಾಸರೂ ಬೆಂಗಳೂರಿನ ಶೇಷಾದ್ರಿಪುರದಲ್ಲಿ ಎರಡು ತಿಂಗಳ ಕಾರ್ಯಕ್ರಮಕ್ಕಾಗಿ ಬೆಂಗಳೂರಿಗೆ ಆಗಮಿಸಿದ್ದರು. ಅಣ್ಣನ ಕಥೆಗಳಲ್ಲಿ ಭಾಗವಹಿಸಿಸುತ್ತಿದ್ದ ತಮ್ಮ ತಾವೇ ಸ್ವತಃ ಹಾರ್ಮೋನಿಯಂ ನುಡಿಸುತ್ತಿದ್ದರು. ಕೆಲವೊಮ್ಮೆ ಅಣ್ಣನ ಹಾಡಿಗೆ ದನಿಗೂಡಿಸುತ್ತಿದ್ದರು. ಅಶ್ವಿನೀ ದೇವತೆಗಳಂತೆ ಅತ್ಯಂತ ತೇಜಸ್ವಿಗಳಾಗಿ ಕಂಗೊಳಿಸುತ್ತಿದ್ದ ಈ ಸಹೋದರರನ್ನು ಕಂಡು ಶ್ರೋತೃವೃಂದ ತಮ್ಮ ಸಂತಸ-ತೃಪ್ತಿ ವ್ಯಕ್ತಪಡಿಸಿದರು.

ಮುಂದೆ ಬೆಂಗಳೂರಿನ ಮಲ್ಲೇಶ್ವರ ಬಡಾವಣೆಯ ಸಿದ್ಧಾಶ್ರಮ, ಅಲ್ಲದೆ ರಾಮೋತ್ಸವ, ಪುರಂದರೋತ್ಸವಗಳಲ್ಲಿ ಇವರ ಕಥಾಕೀರ್ತನೆಗಳು ನಡೆದು ಕೇಶವದಾಸರ ಹೆಸರು ಮನೆಮಾತಾಯಿತು. ಆಗ ಬಂತು ದಾಸರಿಗೆ ಆಹ್ವಾನ ಮಲ್ಲೇಶ್ವರದ 'ಶ್ರೀರಾಮಾಭಜನ ಸಭಾ'ದ ಕಾರ್ಯಕಾರಿಣಿಯಿಂದ. 'ಶ್ರೀಮದ್ರಾಮಾಯಣ'ದ ಸಂಪೂರ್ಣ ಕಥಾನಕದ ಕೀರ್ತನ ಮಾಲೆಯೇ ಇಲ್ಲಿ ನಡೆಯಿತು. ಕಥಾಶ್ರವಣದಿಂದ ಪ್ರಭಾವಿತರಾದ ಅನೇಕ ಸೋದರ ಸೋದರಿಯರು ಕೇಶವದಾಸರ ಶಿಷ್ಯರಾದರು. ಕೆಲವು ವಿದೇಶೀ ಭಕ್ತರೂ

ಇವರ ಕಥೆಗೆ ಮಾರುಹೋದರು. ಕಾನೂನು ಶಾಸ್ತ್ರ ಪದವೀಧರರಾಗಿದ್ದರಿಂದ ಆಂಗ್ಲ ಭಾಷೆಯಲ್ಲಿಯೂ ಸಾಕಷ್ಟು ಪ್ರೌಢಿಮೆ ಹೊಂದಿದ್ದ ದಾಸರು ತಮ್ಮ ಕೀರ್ತನೆಯಲ್ಲಿ ವಿಶ್ವದ ಎಲ್ಲ ಧರ್ಮಗಳ ಕುರಿತು ಪ್ರತಿಪಾದಿಸುವಾಗ ಹಲವಾರು ದೃಷ್ಟಾಂತಗಳನ್ನು ಆಂಗ್ಲ ಭಾಷೆಯಲ್ಲಿ ನಿರೂಪಿಸು ತ್ತಿದ್ದರು. ಇದು ನಗರಕ್ಕೆ ಆಗಮಿಸಿ ಇವರ ಕಥೆ ಕೇಳಿದ ವಿದೇಶೀಯರ ಮೇಲೆ ಸಾಕಷ್ಟು ಪ್ರಭಾವ ಬೀರಿ ಅವರೂ ಸಹ ದಾಸರ ಶಿಷ್ಯವರ್ಗಕ್ಕೆ ಸೇರಿದರು. ತಮ್ಮ ಶಿಷ್ಯವರ್ಗವನ್ನು ಕೂಡಿಸಿ ದಾಸ ಕೀರ್ತನ ಮಂಡಳಿಯನ್ನು ಸ್ಥಾಪಿಸಿದರು ಕೇಶವದಾಸರು.

## ನ್ಯಾಯಾಲಯದ ನಷ್ಟ-ಕೀರ್ತನ ಕ್ಷೇತ್ರದ ಲಾಭ

ರಾಮಭಜನ ಸಭಾದಲ್ಲಿ ಒಂದು ತಿಂಗಳ ಕಾಲ ಅವ್ಯಾಹತವಾಗಿ ಕೇಶವದಾಸರ ಕೀರ್ತನರೂಪೀ ಪ್ರವಚನ ನಡೆಯಿತು. ಕೊನೆಯದಿನದ ಮಂಗಳ ಹಾಗೂ ಸಮಾರೋಪದ ಕಾರ್ಯಕ್ರಮ. ಮಾರನೆಯ ದಿನವೇ ದಾಸರು ವಕೀಲಿ ವೃತ್ತಿಗಾಗಿ ಕೋರ್ಟಿನಲ್ಲಿ ಸನ್ನದನ್ನು ಪಡೆಯಬೇಕಿತ್ತು. ನ್ಯಾಯವಾದಿಯಾಗಿ ವೃತ್ತಿ ಆರಂಭಿಸಬೇಕಿತ್ತು. ಅಂದು ಕಾರ್ಯಕ್ರಮಕ್ಕೆ ಭಕ್ತರ-ಶ್ರೋತೃಗಳ ಮಹಾಪೂರವೇ ಹರಿದಿತ್ತು. ದಾಸರು ಮಂಗಳ ಶ್ಲೋಕ ಹಾಡಿ ಮುಗಿಸುತ್ತಿದ್ದ ಹಾಗೇ ಬಂದಂಥ ಎಲ್ಲ ಭಕ್ತರು ತಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ಧನ ಹಾಗೂ ವಸ್ತು ರೂಪದಲ್ಲಿ ಕಾಣಿಕೆಯನ್ನು ದಾಸರ ಪದತಲದಲ್ಲಿ ಅರ್ಪಿಸಿದರು. ರಾಶಿರಾಶಿಯಾಗಿ ತಮ್ಮ ಪದತಲದಲ್ಲಿ ಬಂದು ಶೇಖರವಾದ ಸಂಪತ್ತನ್ನು ನೋಡಿದ ಕೇಶವದಾಸರು 'ಸಮರ್ಪಣ' ಭಾವದಿಂದ ಭಗವಂತನನ್ನು ಸ್ತುತಿಸಿ ಜನರಲ್ಲಿ ನೀತಿಬೋಧೆ ಮಾಡಿ ಅವರನ್ನು ಸನ್ಮಾರ್ಗಕ್ಕೆ ಎಳೆಯುವ ಈ ಕೀರ್ತನ ಮಾಧ್ಯಮಕ್ಕಿಂತ ಬೇರೊಂದು ಉದ್ಯೋಗವಿಲ್ಲ. ನ್ಯಾಯಕ್ಕಾಗಿ, ಅನೃತವನ್ನು ನುಡಿಯಬೇಕಾಗಬಹುದಾದ ನ್ಯಾಯವಾದಕ್ಕಿಂತ ಈ ತತ್ವವಾದವೇ ಮೇಲು ಎಂದು ನಿಶ್ಚೈಸಿ ತಮ್ಮ ವಕೀಲಿ ವೃತ್ತಿಯನ್ನು ತ್ಯಜಿಸಿದರು. ಭಗವಂತನ ವಕೀಲರಾಗಿ ಆಧ್ಯಾತ್ಮ ಚಿಂತನೆಗೆ ತಮ್ಮನ್ನು ತಾವೇ ಅರ್ಪಿಸಿಕೊಂಡು ಧನ್ಯರಾದರು ಭದ್ರಗಿರಿ ಕೇಶವದಾಸರು. ಇದು ನ್ಯಾಯಾಲಯಕ್ಕೆ ತುಂಬಲಾಗದ ನಷ್ಟವಾದರೂ ಧಾರ್ಮಿಕ ಕ್ಷೇತ್ರಕ್ಕೆ ಇದರಿಂದ ಅಪಾರ ಲಾಭವಾಯಿತು. ದೇಶಕ್ಕೇ ಒಬ್ಬ ದಾರ್ಶನಿಕನನ್ನು ನೀಡಿ ವಿಶ್ವಮಾತೆ ಧನ್ಯಳಾದಳು. ಬೆಂಗಳೂರಿನ ಅನೇಕ ಸಂಸ್ಥೆಗಳು ಸಭೆಗಳನ್ನು ಏರ್ಪಡಿಸಿ ದಾಸರನ್ನು ಗೌರವಿಸಿ ಸನ್ಮಾನಿಸಿ ತಮ್ಮ ಘನತೆಯನ್ನು ಕಾಪಾಡಿ ಕೊಂಡರು.

## ದಾಸಾಶ್ರಮ ಸ್ಥಾಪನೆ

ಬೆಂಗಳೂರಿಗೆ ವಲಸೆ ಬಂದ ಕೇಶವದಾಸರು ಮಲ್ಲೇಶ್ವರದ ಪ್ಯಾಲೆಸ್ ಗುಟ್ಟ ಹಳ್ಳಿಯಲ್ಲಿ ಒಂದು ಬಾಡಿಗೆ ಮನೆ ಹಿಡಿದು ಅಲ್ಲಿ ವಾಸಿಸುತ್ತಿದ್ದರು. ಮುಂದೆ ಸಂಸಾರ ಬೆಳೆಯಿತು. ಅವರಿಗೂ ಎರಡು ಗಂಡು ಒಂದು ಹೆಣ್ಣು ಮಗು ಜನಿಸಿದರು. ಭದ್ರಗಿರಿ ಅಚ್ಯುತದಾಸರು ಗೃಹಸ್ಥರಾಗಿ ಮಕ್ಕಳನ್ನು ಪಡೆದಿದ್ದರು. ತಮ್ಮ ಸರ್ವೋತ್ತಮ ಪೈ ಬಿ.ಎಸ್ಸಿ. ಪದವಿ ಪಡೆದು ಬೆಂಗಳೂರಿಗೆ ಬಂದಿದ್ದರು. ಅವರಿಗೂ ವಿವಾಹವಾಗಿ ಈಗಿದ್ದ ಮನೆ ಸಾಲದೆ ಬಂದಿದ್ದರಿಂದ ಈಜುಕೊಳ ಬಡಾವಣೆಯಲ್ಲಿ ಒಂದು ದೊಡ್ಡಮನೆಯನ್ನು ಬಾಡಿಗೆಗೆ ಪಡೆದು ಅಲ್ಲಿ ವಾಸಿಸಲಾರಂಭಿಸಿದರು. ಪ್ಯಾಲೆಸ್‌ಗುಟ್ಟಹಳ್ಳಿಯ ಮನೆಯಲ್ಲಿ ದಾಸಾಶ್ರಮ ಮತ್ತು ಕೀರ್ತನ ಮಹಾವಿದ್ಯಾಲಯ ಸ್ಥಾಪಿಸಿ ಕೀರ್ತನ ರಂಗದ ಅಭಿವೃದ್ಧಿಗೆ ಭದ್ರಬುನಾದಿ ಹಾಕಿದರು. ಹೀಗೆ ಆರಂಭವಾಯಿತು ದಾಸಾಶ್ರಮ.

ಬೆಂಗಳೂರಿನ ಗಾಂಧಿನಗರದ ಧರ್ಮರತ್ನಾಕರ ಅರಸೋಜಿರಾಯರು ಹೆಸರಿಗೆ ತಕ್ಕಂತೆ ಧರ್ಮಭೀರುಗಳು. ಯಾತ್ರಿಕರಿಗೆ, ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಅನೇಕ ಧರ್ಮಛತ್ರಗಳನ್ನು ಕಟ್ಟಿಸಿಕೊಟ್ಟು ತಮ್ಮ ಹೆಸರನ್ನು ಶಾಶ್ವತವಾಗಿ ನಿಲ್ಲಿಸಿ ಹರಿಪಾದ ಸೇರಿದರು. ಅವರ ಪತ್ನಿ ಮುನ್ನೂಬಾಯಿ ಸಾಧ್ವಿ, ಗಂಡನ ಹಾದಿಯಲ್ಲೇ ಬಾಳು ಸಾಗಿಸಿದವರು. ಬೆಂಗಳೂರಿನಲ್ಲಿ ನಡೆಯುತ್ತಿದ್ದ ಕೇಶವದಾಸರ ಕಥಾಕೀರ್ತನೆಗಳನ್ನು ಕೇಳಿ ಪ್ರಭಾವಿತರಾದರು. ಗುರುಭಾವನೆ ಯನ್ನು ತಳೆದಿದ್ದವರು. ಇವರಿಗೆ ಏನಾದರೂ ಗುರುಸೇವೆ ಮಾಡಬೇಕೆಂಬ ತೀರ್ಮಾನಕ್ಕೆ ಆಕೆ ಮತ್ತು ಆಕೆಯ ಮಕ್ಕಳು ಬಂದಿದ್ದರು. ಕೀರ್ತನ ಶ್ರವಣದಿಂದ ಆಕೆಯ ಮನಃಕ್ಲೇಶದೂರವಾಗಿ ಅಪಾರ ಶಾಂತಿಯನ್ನು ನೀಡಿತ್ತು. ಕೇಶವದಾಸರು ದಾಸಾಶ್ರಮವನ್ನು ಸ್ಥಾಪಿಸಿ ಅಲ್ಲಿ ಕೀರ್ತನ ಶಿಕ್ಷಣವನ್ನು ನೀಡುತ್ತಿರುವ ವಿಷಯ ಆಕೆಗೆ ತಿಳಿದಿತ್ತು. ಅದು ಬಾಡಿಗೆಯ ಮನೆಯೆಂದೂ ಗೊತ್ತಿತ್ತು. ರಾಜಾಜಿನಗರದ ಐದನೇ ವಿಭಾಗದಲ್ಲಿ ಅರಸೋಜಿರಾಯರು ಕಟ್ಟಿಸಿದ ಧರ್ಮಛತ್ರವೊಂದಿದ್ದು ಅದೊಂದು ಪವಿತ್ರ ವಾತಾವರಣದಿಂದ ಕೂಡಿದ ತಾಣವಾಗಿತ್ತು. ಮುನ್ನೂಬಾಯಿ ಅದನ್ನು ದಾಸಾಶ್ರಮಕ್ಕೆ ದಾನವಾಗಿ ನೀಡಲು ಸಂಕಲ್ಪಿಸಿ ಒಂದು ಶುಭಮುಹೂರ್ತದಲ್ಲಿ ದಾನಪತ್ರ ಬರೆಸಿ ಅದನ್ನು ಕೇಶವದಾಸರಿಗೆ ನೀಡಿದರು. ೧೯೬೭ರ ವಿಜಯದಶಮಿಯ ದಿನ ರಾಜಾಜಿನಗರದಲ್ಲಿ ಉಡುಪಿಯ ಅಧಮಾರು ಮಠಾಧೀಶರಾದ ಶ್ರೀ ಶ್ರೀ ವಿಭುದೇಶ ತೀರ್ಥರ ಅಮೃತ ಹಸ್ತದಿಂದ ದಾಸಾಶ್ರಮ ಉದ್ಘಾಟಿಸಲ್ಪಟ್ಟಿತು.

ಅಲ್ಲಿ ಪಾಂಡುರಂಗ, ರುಕ್ಮಾಯಿ, ಈಶ್ವರ, ಸುಬ್ರಹ್ಮಣ್ಯ, ಗಣಪತಿಯ ವಿಗ್ರಹಗಳನ್ನು ಪ್ರತಿಷ್ಠಾಪಿಸಿ, ಒಂದು ಮಂದಿರ ನಿರ್ಮಾಣವಾಗಿ ಪುಣ್ಯತಾಣವಾಯಿತು. ಮುಂದೆ ಪುರಂದರದಾಸರ ೪ನೇ ಶತಾಬ್ಧಿಯ ಅಂಗವಾಗಿ ಅಮೃತ ಶಿಲೆಯ ಪುರಂದರ ದಾಸರ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಜೊತೆಯಲ್ಲಿಯೇ ಶ್ರೀ ಸತ್ಯನಾರಾಯಣ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಹುಣ್ಣಿಮೆ, ಸಂಕ್ರಮಣ ಪರ್ವದಿನಗಳಲ್ಲಿ ಪೂಜಾದಿ ಕೈಂಕರ್ಯಗಳನ್ನು ನಡೆಸುವಂತಾಯಿತು. ಈ ಪವಿತ್ರಕ್ಷೇತ್ರಕ್ಕೆ ಪುರಂದರಪುರವೆಂದು ನಾಮಕರಣ ಮಾಡಲಾಯಿತು. ಈಗ ಈ ದಾಸಾಶ್ರಮ ವಿಶ್ವವಿಖ್ಯಾತವಾಗಿ ದಾಸಾಶ್ರಮ ಅಂತರ್ರಾಷ್ಟ್ರೀಯ ಕೇಂದ್ರವಾಗಿ ಪರಿವರ್ತಿತವಾಗಿದೆ.

## ಅಖಿಲ ಕರ್ನಾಟಕ ಕೀರ್ತನ ಕಲಾ ಸಮ್ಮೇಳನ

ಕರ್ನಾಟಕಾದ್ಯಂತ ಹರಿದು ಹಂಚಿಹೋಗಿರುವ ಕೀರ್ತನಕಾರರನ್ನು ಒಟ್ಟುಗೂಡಿಸಿ ಒಂದು ಪರಿಷತ್ತನ್ನು ಸ್ಥಾಪಿಸುವ ಸಂಕಲ್ಪಹೊಂದಿದ್ದ ಕೇಶವದಾಸರು ಇದಕ್ಕಾಗಿ ಒಂದು ಸಮ್ಮೇಳನ ನಡೆಸಲು ತೀರ್ಮಾನಿಸಿದರು. ಈ ಹೊತ್ತಿಗೆ ಕೇಶವದಾಸರು ಕೀರ್ತನಕಾರ ಮಾತ್ರವಲ್ಲದೆ ಕವಿ-ಸಾಹಿತಿಯೂ ಆಗಿ ಅನೇಕ ಕೀರ್ತನೆಗಳನ್ನು ರಚಿಸಿದ್ದರು. 'ಪುರಂದರೋಪನಿಷತ್' ಎಂಬ ಉದ್ಗ್ರಂಥ ಸಹ ರಚಿತವಾಗಿತ್ತು. ಅನೇಕ ಪತ್ರಿಕೆಗಳಲ್ಲಿ ಇವರ ಕುರಿತು ಪ್ರಶಂಸಾತ್ಮಕ ಲೇಖನಗಳು ಬಂದು ಅದು ಅಂದಿನ ರಾಜ್ಯಪಾಲ ಮೈಸೂರು ಸಂಸ್ಥಾನದ ಕೊನೆಯ ಆಳರಸರಾಗಿದ್ದ ಶ್ರೀ ಜಯಚಾಮರಾಜವೊಡೆಯರ ಕಿವಿಗೂ ಬಿದ್ದಿತ್ತು. ಮೈಸೂರು ರಾಜ್ಯದ ವಿಧಾನ ಸಭಾಪತಿಗಳಾಗಿದ್ದ ವೈಕುಂಠ ಬಾಳಿಗಾ ಅವರ ಮೂಲಕ ಕೇಶವದಾಸರಿಗೆ ಒಡೆಯರ್ ಅವರ ಭೇಟಿ ಲಭಿಸಿತು. ರಾಜ್ಯಮಟ್ಟದ ಕೀರ್ತನಕಾರರ ಸಮ್ಮೇಳನದ ಉದ್ಘಾಟನೆ ಮಹಾರಾಜರನ್ನು ಆಹ್ವಾನಿಸಿದಾಗ ಅವರು ಸಂತೋಷದಿಂದ ಒಪ್ಪಿಕೊಂಡರು.

ಕರ್ನಾಟಕದ ಕೀರ್ತನಕಾರರ ವಿಳಾಸವನ್ನು ಸಂಗ್ರಹಿಸಿ ಎಲ್ಲ ಕೀರ್ತನಕಾರರನ್ನು ಸಮ್ಮೇಳನಕ್ಕೆ ಆಹ್ವಾನಿಸಿದರು. ೪-೩-೧೯೬೪ರಂದು ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಿದ ಮಹಾರಾಜರು ಸರ್ವರಿಗೂ ಶುಭ ಕೋರಿದರು. 'ನಭೂತೋ ನಭವಿಷ್ಯತಿ' ಎನ್ನುವಂತೆ ಈ ಸಮ್ಮೇಳನ ಅತ್ಯಂತ ವಿಜೃಂಭಣೆಯಿಂದ ನಡೆದು ಭದ್ರಗಿರಿ ಸಹೋದರರ ಕೀರ್ತಿ ಉತ್ತುಂಗ ಶಿಖರಕ್ಕೇರಿತು. ಅಷ್ಟೇ ಅಲ್ಲದೆ ೧೯೬೫ರಲ್ಲಿ ಅಖಿಲ ಭಾರತ ಕೀರ್ತನಕಾರರ ಸಮ್ಮೇಳನವನ್ನು ನಡೆಸಿ-ಭಾರತೀಯ ಸಂತ ಸಮ್ಮೇಳನದ ಸಂಘಟಕರಾದರು.

## ವಿದೇಶ ಪ್ರವಾಸ

ಭಾರತೀಯ ಸಂಸ್ಕೃತಿ ಪರಂಪರೆಯನ್ನು ಎತ್ತಿ ಹಿಡಿದು ಆಧ್ಯಾತ್ಮದ ಮೂಲಕ ಶಾಂತಿ ಸಂದೇಶ ನೀಡುತ್ತಿದ್ದ ಕೇಶವದಾಸರ ಕೀರ್ತಿ ಸಾಗರದಾಚೆಯೂ ಪಸರಿಸಿ ಜರ್ಮನಿಯ ದಿವ್ಯಜೀವನ ಸಂಘದ ವತಿಯಿಂದ ಕೆಲವು ದಿನಗಳ ಕಾಲ ಪ್ರವಚನ ನೀಡುವಂತೆ ಆಹ್ವಾನ ಬಂತು. ಅದರಂತೆ ವಿದೇಶಯಾತ್ರೆಗೆ ಬೇಕಾದ ಸಕಲ ಸಂಪ್ರದಾಯಗಳನ್ನು ಮುಗಿಸಿ ೧೯೬೬ರಲ್ಲಿ ತಮ್ಮ ಪ್ರಥಮ ವಿಶ್ವಯಾತ್ರೆಯನ್ನು ಆರಂಭಿಸಿದ ಕೇಶವದಾಸರು ಅವ್ಯಾಹತವಾಗಿ ೩೮ ಬಾರಿ ವಿಶ್ವಪರ್ಯಟನೆ ಮಾಡಿ ಭಾರತೀಯ ಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ಎತ್ತಿ ಹಿಡಿಯುವಲ್ಲಿ ಯಶಸ್ವಿಯಾದರು. ವಿಶ್ವದಾದ್ಯಂತ ಅನೇಕ ಶಿಷ್ಯಸಮೂಹವನ್ನು ಪಡೆದರು. ಅಮೆರಿಕಾ, ಪಶ್ಚಿಮ ಇಂಡೀಸ್, ಆಫ್ರಿಕಾ, ಲಂಡನ್ ನಗರ ಮುಂತಾದೆಡೆಗಳಲ್ಲಿ ವಿಶ್ವಶಾಂತಿ ಆಶ್ರಮವನ್ನು ಸ್ಥಾಪಿಸಿದರು. ಸ್ವಾಮಿ ವಿವೇಕಾನಂದರ ವಾಣಿ ಅಮೇರಿಕನ್ ಪ್ರಜೆಗಳಲ್ಲಿ ಇನ್ನೂ ಅಚ್ಚಳಿಯದಂತಿರುವಾಗಲೇ ಅವರ ಉಪದೇಶಾಮೃತದ ಸಾರವನ್ನು ಮತ್ತೊಮ್ಮೆ ಪಸರಿಸುವಂತೆ ಮಾಡಿದ ಮತ್ತೊಬ್ಬ ದಾರ್ಶನಿಕರಾದರು ಕೇಶವದಾಸರು. ಶಾಂತಿ ದೂತನೆನಿಸಿದರು. ೧೯೬೦ರಲ್ಲಿ 'ದಾಸವಾಣಿ' ಎಂಬ ದಿನ ಪತ್ರಿಕೆಯನ್ನು ಆರಂಭಿಸಿ ಮನೆಮನೆಗೂ ಆಧ್ಯಾತ್ಮ ಸಂದೇಶ ಮುಟ್ಟುವಂತೆ ಶ್ರಮಿಸಿದರು. ಅನಂತರ ಇದು ೧೯೬೪ರಲ್ಲಿ ಮಾಸ ಪತ್ರಿಕೆಯಾಗಿ ಪರಿವರ್ತಿತವಾಯಿತು.

## ವಿಶ್ವಶಾಂತಿ ಆಶ್ರಮ

ಬೆಂಗಳೂರಿನಲ್ಲಿ ಭವ್ಯವಾದ ವಿಠಲಮೂರ್ತಿಯನ್ನು ಪ್ರತಿಷ್ಠಾಪಿಸಿ ಒಂದು ವಿಶ್ವಶಾಂತಿ ಆಶ್ರಮವನ್ನೇ ಸ್ಥಾಪಿಸಬೇಕೆಂಬ ಉತ್ಕಟಾಂಕ್ಷೆ ಕೇಶವದಾಸರಲ್ಲಿ ಮನೆಮಾಡಿತ್ತು. ಇದಕ್ಕಾಗಿ ಒಂದು ಪ್ರಶಸ್ಥವಾದ ಸ್ಥಳಕ್ಕಾಗಿ ಶೋಧ ನಡೆದೇ ಇತ್ತು. ಅದಕ್ಕೂ ಮುಹೂರ್ತ ಕೂಡಿ ಬಂತು. ನೆಲಮಂಗಲ ತಾಲೂಕಿನ ಅರಸಿನಕುಂಟೆ ಗ್ರಾಮದಲ್ಲಿ ಸುಮಾರು ೧೪ ಎಕರೆಯಷ್ಟು ವಿಸ್ತಾರವಾದ ಸ್ಥಳ ಬಿಕರಿಗೆ ಸಿದ್ಧವಾಗಿತ್ತು. ಬೆಲೆಯೂ ಸುಮಾರು ೧೪ ಲಕ್ಷ ಎಂದು ಅಂದಾಜು ಮಾಡಲಾಗಿತ್ತು. ಆದರೆ ಅಷ್ಟೊಂದು ಹಣ ಎಲ್ಲಿಂದ ಒದಗಿಸುವುದೆಂಬ ಚಿಂತೆ ಅವರನ್ನು ಕಾಡಿದಾಗ ಅವರ ಸಹಾಯಕ್ಕೆ ಸಾಕ್ಷಾತ್ ಪಾಂಡುರಂಗನೇ ಬಂದ.

ವೆಸ್ಟ್ ಇಂಡೀಸ್‌ನ ಟ್ರಿನಿಡಾಡ್‌ನಲ್ಲಿದ್ದ ಓರ್ವ ಭಾರತೀಯ - ಪ್ರೇಮರಾಜ್ ಭಜರಂಗಿ ಎಂದು ಹೆಸರು. ಆತ ಮನಸ್ಥೈರ್ಯ ಕಳೆದುಕೊಂಡು ಚಿತ್ತ ಶಾಂತಿಯಿಲ್ಲದ ತೊಳಲುತ್ತಿದ್ದ. ಕೇಶವದಾಸರ ಪ್ರವಚನಕ್ಕೆ

ಪ್ರಭಾವಿತನಾಗಿ ಅವರ ಸತ್ಸಂಗದಿಂದ ತಕ್ಕಮಟ್ಟಿನ ಮನಶ್ಶಾಂತಿ ಪಡೆದಿದ್ದ. ಆತ ಕೇಶವದಾಸರ ಸಂಕಲ್ಪವನ್ನು ತಿಳಿದು ಅರಸಿನಕುಂಟೆಯ ಭೂಮಿಯನ್ನು ಖರೀದಿಸಿ ವಿಶ್ವಶಾಂತಿ ಆಶ್ರಮದ ನಿರ್ಮಾಣಕ್ಕಾಗಿ ದಾನ ನೀಡಿದ. ದಾಸರ ಸತತ ಶ್ರಮದಿಂದ ಅಲ್ಲಿ ೩೨ ಅಡಿಗಳ ಭವ್ಯ ಮೂರ್ತಿ ವಿಶ್ವವಿಜಯವಿಠಲ ಇಂದು ವಿಜೃಂಭಿಸಿದ್ದಾನೆ. ಅವನ ಸುತ್ತಲೂ ಅಷ್ಟಲಕ್ಷ್ಮಿಯರು ವಿರಾಜಮಾನರಾಗಿದ್ದಾರೆ. ರಾಮತಾರಕ ಮಂತ್ರದ ಜಪ ಪುಸ್ತಕ ಗಳನ್ನು ಸಂಗ್ರಹಿಸಿ ವಿಠಲನ ಎಡ-ಬಲದ ಸ್ಥಂಭಗಳಲ್ಲಿ ಇಡಲಾಗಿದೆ. ಗಣಪತಿ, ಆಂಜನೇಯ, ದತ್ತಾತ್ರೇಯ, ಕನಕ-ಪುರಂದರರು ಆಶ್ರಮದ ಆವರಣದಲ್ಲಿ ವಿರಾಜಮಾನರಾಗಿದ್ದಾರೆ. ಈಗ ಇದೊಂದು ದೊಡ್ಡ ಸಂಸ್ಥೆಯಾಗಿ ವಿಶ್ವಶಾಂತಿನಗರವೆನಿಸಿಕೊಂಡಿದೆ.

## ಅದ್ವಿತೀಯ ಗೀತಾಮಂದಿರ

ಇಷ್ಟಾದರೂ ಇನ್ನೇನಾದರೂ ಸಾಧಿಸಬೇಕೆಂಬ ಕಾಮನೆ ಮನಸ್ಸಿನಲ್ಲಿತ್ತು. ಭಗವದ್ಗೀತಾಚಾರ್ಯನೆನಿಸಿಕೊಂಡಿರುವ ಶ್ರೀಕೃಷ್ಣನ ಅಪಾರ ಭಕ್ತಶಿರೋಮಣಿದಾಸರು. ಗೀತೆಯ ಬಗ್ಗೆ ಅಪಾರ ಗೌರವ ಭಕ್ತಿ. ತಮ್ಮ ಜೀವನದುದ್ದಕ್ಕೂ ಭಗವದ್ಗೀತೆಯ ಪ್ರಚಾರ-ಪ್ರವಚನ ಗೈದ ದಾಸರಿಗೆ ಆ ಗೀತಾಚಾರ್ಯನಿಗೆ ಸೂಕ್ತ ಮಂದಿರ ನಿರ್ಮಿಸಿ ಭಗವದ್ಗೀತಾ ಶ್ಲೋಕ ಪ್ರತಿಯೊಬ್ಬ ಮಾನವನಿಗೂ ಮುಟ್ಟಬೇಕೆಂಬ ಹಿರಿದಾಸೆ ಅವರಲ್ಲಿತ್ತು. ಅದಕ್ಕೂ ಕಾಲವೊದಗಿ ಬಂದು ವಿಶ್ವಶಾಂತಿ ಆಶ್ರಮದ ಆವರಣದಲ್ಲೇ ಭವ್ಯವಾದ ಗೀತಾಮಂದಿರ ನಿರ್ಮಾಣವಾಯಿತು. ಭಗವದ್ಗೀತೆಯ ಹದಿನೆಂಟು ಅಧ್ಯಾಯದ ಶ್ಲೋಕಗಳೂ ಕೃಷ್ಣಶಿಲೆಯಲ್ಲಿ ರೂಪಗೊಂಡು ಅದೇ ಮಂದಿರದ ಗೋಡೆಯಾಯಿತು. ಭಗವಂತ ತನ್ನ ವಿಶ್ವರೂಪವನ್ನು ಅರ್ಜುನನಿಗೆ ತೋರಿಸುತ್ತಿರುವ ಭವ್ಯಮೂರ್ತಿ, ಮಂದಿರವೇ ರಥದ ವಿನ್ಯಾಸದಲ್ಲಿದ್ದು ಅರ್ಜುನನಿಗೆ ಗೀತೋಪದೇಶ ನೀಡುತ್ತಿರುವ ಭವ್ಯ ಕೆತ್ತನೆ ಇಲ್ಲಿ ಮೂಡಿಬಂದಿದೆ. ದಾನಿಗಳ ಮಹಾಪೂರವೇ ಹರಿದು ಈ ನಿರ್ಮಾಣಕಾರ್ಯ ಅತಿಕಡಿಮೆ ಅವಧಿಯಲ್ಲೇ ಮುಗಿದು ಭಾರತೀಯ ಸಂಸ್ಕೃತಿಯ ಪ್ರೇರಕ ಶಕ್ತಿಯಾಗಿ ನಿಂತಿದೆ. ಅಲ್ಲಿಯೇ ಇರುವ ಗಾಯತ್ರೀ ಮಂದಿರ ಇಂದು ಒಂದು ಆಧ್ಯಾತ್ಮ ಮಹಾವಿದ್ಯಾಲಯವಾಗಿ ಪರಿವರ್ತಿತ ವಾಗಿದೆ. ಇದಲ್ಲದೆ ಇವರು ಸ್ಥಾಪಿಸಿದ ಕೀರ್ತನ ಮಹಾವಿದ್ಯಾಲಯ ಸಹ ಒಂದು ವಿಶ್ವವಿದ್ಯಾಲಯವಾಗಿ ಅನೇಕ ಕೀರ್ತನಕಾರರು ಇಲ್ಲಿಂದ ತಯಾರಾಗಿದ್ದಾರೆ. ಆಂಧ್ರದ ವಿಶಾಖಪಟ್ಟಣ, ರಾಜಮಹೇಂದ್ರಿ ಮುಂತಾದೆಡೆಯೂ ಆಶ್ರಮ ಸ್ಥಾಪನೆ ಮಾಡಿದ್ದಾರೆ. ಹೀಗೆ ಕೇಶವದಾಸರು

ಕೇವಲ ಕೀರ್ತನಕಾರರಾಗಿ ಮಾತ್ರವಲ್ಲ ಭಾರತೀಯ ಸಂಸ್ಕೃತಿ ಪರಂಪರೆಯ ಭವ್ಯ ಶಿಲ್ಪಿಯಾಗಿ ಮೆರೆದಿದ್ದಾರೆ.

## ಹಾಡಿಕೆಯ ಶೈಲಿ

ಕರ್ನಾಟಕ ಹಿಂದೂಸ್ತಾನೀ ಎರಡೂ ಪದ್ಧತಿಗಳಲ್ಲೂ ಸಾಕಷ್ಟು ಪರಿಶ್ರಮ ಹೊಂದಿರುವ ಕೇಶವದಾಸರು ಎರಡೂ ಪದ್ಧತಿಯ ರಾಗಗಳನ್ನು ಬಳಸಿಕೊಂಡು ಹಾಡುವ ಪರಿಣತಿ ಪಡೆದಿದ್ದರು. ಗೌಳ ಶಾರೀರ, ಮಾಧುರ್ಯಯುಕ್ತ ಗಾಯನದೊಂದಿಗೆ ಸಾಹಿತ್ಯಕ್ಕೆ ತಕ್ಕ ರಸಪೋಷಣೆ ನೀಡುವಲ್ಲಿ ಸಮರ್ಥರು. ಸ್ವತಃ ಹಾರ್ಮೋನಿಯಂ ನುಡಿಸಿಕೊಂಡು ಹಾಡುವ ಪರಿಪಾಠ ಇವರದ್ದು. ಚಿಕ್ಕದಾದ ಚೊಕ್ಕ ಸಂಸಾರ. ಪತ್ನಿ ರಮಾಬಾಯಿ, ಗಂಡುಮಕ್ಕಳು ಮುರಳೀಧರ ಪೈ ಹಾಗೂ ರಾಧೇಶ್ಯಾಮ ಪೈ, ಮಗಳು ಗೀತಾಭಟ್ ಎಲ್ಲರೂ ಗೃಹಸ್ಥರಾಗಿ ದಾಸರಿಗೆ ಮೊಮ್ಮಕ್ಕಳನ್ನು ನೀಡಿದ್ದಾರೆ. ತಬಲಾ ವಾದನದಲ್ಲಿ ಇಬ್ಬರೂ ನಿಷ್ಣಾತರು. ತಂದೆಯ ಅನೇಕ ಕಥೆಗಳಲ್ಲಿ ಪಾಲ್ಗೊಂಡಿದ್ದಾರೆ. ಅಲ್ಲದೆ ಅಪಾರ ಶಿಷ್ಯಕೋಟಿಯನ್ನು ಹೊಂದಿದ್ದಾರೆ.

## ಗ್ರಂಥ ರಚನೆ ಹಾಗೂ ಧ್ವನಿ ಸುರುಳಿಗಳು

ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಅನೇಕ ಗ್ರಂಥ ರಚನೆ ಮಾಡಿದ್ದಾರೆ. ಮುಖ್ಯವಾಗಿ ಪುರಂದರೋಪನಿಷತ್ತು - ೪ ಸಂಪುಟಗಳು, ದಾಸ ರಾಮಾಯಣ; ದಾಸಭಾರತ; ಸದ್ಗುರು ವಚನಾಮೃತ; ದಾಸಹೃದಯ ತರಂಗ ಅಲ್ಲದೆ ಆಂಗ್ಲ ಭಾಷೆಯಲ್ಲಿ Doctrine of Reincarnation, Voice of Bhadragiri, Prema Yoga, Bhakti Yoga, Essence of Bhagavadgita, Gitacharya and Other Dramas, Sadguru Dattatreya etc. etc.

ಮದರಾಸಿನ ಮಾಸ್ಟರ್ ರೆಕಾರ್ಡಿಂಗ್ ಸಂಸ್ಥೆಯವರು ನೂರಕ್ಕೂ ಮಿಕ್ಕಿ ಕೇಶವದಾಸರ ಕಥಾಪ್ರಸಂಗಗಳ ಧ್ವನಿ ಸುರುಳಿಗಳನ್ನು ಬಿಡುಗಡೆ ಮಾಡಿದ್ದಾರೆ. ಇವರು ಹಾಡಿರುವ ದೇವರನಾಮಗಳು, ವಚನಗಳು, ಭಕ್ತಿಗೀತೆಗಳು ಅತ್ಯಂತ ಬೇಡಿಕೆಯಲ್ಲಿದ್ದು ಎಲ್ಲರ ಮನೆಮಾತಾಗಿದೆ.

## ಪ್ರಶಸ್ತಿ ಗೌರವಗಳು

ಪ್ರಶಸ್ತಿ ಗೌರವಗಳನ್ನು ಕೇಶವದಾಸರು ಎಂದೂ ಹುಡುಕಿಕೊಂಡು ಹೋದವರಲ್ಲ. ಅವು ತಾವಾಗಿಯೇ ಅವರ ಮಡಿಲಿಗೆ ಬಂದು


ಬಿದ್ದಿವೆ. ''ಹರಿಕಥಾ ಕಲಾವಿಚಕ್ಷಣ''; ''ಕೀರ್ತನ ಕೇಸರಿ''; ''ಕೀರ್ತನ ನಾಟಕ ವಿಶಾರದ''; ಹೀಗೆ ಒಂದೇ ಎರಡೇ! ಪಟ್ಟಿಮಾಡಲ ಸಾಧ್ಯವೆನಿಸುವಷ್ಟು ಪ್ರಶಸ್ತಿಗಳು ದೇಶವಿದೇಶಗಳಿಂದ ಲಭಿಸಿವೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ನೀಡಿದ ಸರ್ಕಾರ ತನ್ನ ಘನತೆಯನ್ನು ಕಾಪಾಡಿಕೊಂಡು ಬಂದಿತೆಂದರೆ ಅತಿಶಯೋಕ್ತಿಯೇನಲ್ಲ.

## ಶಾಂತಿದೂತನ ಅಸ್ತಂಗತ

ಭಾರತೀಯ ಸಾಂಸ್ಕೃತಿಕ ಪರಂಪರೆಯ ಶಾಂತಿದೂತನಾಗಿ, ವಿಶ್ವಶಾಂತಿಯ ರಾಯಭಾರಿಯಾಗಿ, ಕೀರ್ತನ ಕಲಾಕ್ಷೇತ್ರದ ಧ್ರುವತಾರೆಯಾಗಿ ಮೆರೆದ ಕೇಶವದಾಸರು ಈಗ್ಗೆ ಕೆಲವು ಸಮಯದಿಂದ ಅಸ್ವಸ್ಥರಾಗಿದ್ದರೂ ಅವರ ಕಾರ್ಯಾಚರಣೆಗೆ ಯಾವ ಭಂಗವೂ ಬಂದಿರಲಿಲ್ಲ. ಯಾವುದೋ ಕಾರ್ಯ ನಿಮಿತ್ತ ವಿಶಾಖಪಟ್ಟಣಕ್ಕೆ ತೆರಳಿದ್ದ ಕೇಶವದಾಸರು ಮತ್ತೆ ಹಿಂದಿರುಗಲಿಲ್ಲ. ತೀವ್ರ ಹೃದಯಾಘಾತದಿಂದ ಅಲ್ಲೇ ಕೊನೆಯುಸಿರೆಳೆದರು.

ಈಶ್ವರನಾಮ ಸಂವತ್ಸರದ ಮಾರ್ಗಶಿರ ಶುದ್ಧ ಪಂಚಮಿಯಂದು ಕೀರ್ತನ ಕ್ಷೇತ್ರದ ಧ್ರುವತಾರೆಯು ಅಸ್ತಂಗತವಾಯಿತು. ವಿಶಾಖಪಟ್ಟಣಕ್ಕೆ ತೆರಳಿದ ದಾಸರ ಪಾರ್ಥಿವ ಶರೀರ ಮಾತ್ರ ಬಂದು ವಿಶ್ವಶಾಂತಿ ಆಶ್ರಮದ ಗೀತಾಚಾರ್ಯನಲ್ಲಿ ಲೀನವಾಗಿ ಹೋಯಿತು.

ಕೇಶವದಾಸರು ಅಸ್ತಂಗತರಾದರು, ಆದರೆ ಅವರ ಅಮರವಾಣಿ ಮಾತ್ರ ಎಲ್ಲರ ಹೃದಯದಲ್ಲಿ ಮೊಳಗುತ್ತಿದೆ. ಅದಕ್ಕೆ ಸಾವಿಲ್ಲ!



# ಸಂತ ಭದ್ರಗಿರಿ ಅಚ್ಯುತದಾಸರು

ಭದ್ರಗಿರಿ! ನಿಸರ್ಗದ ನೆಲೆವೀಡಾದ ದಕ್ಷಿಣ ಕನ್ನಡ ಜಿಲ್ಲೆಯ ಪರಶುರಾಮ ಕ್ಷೇತ್ರವೆನಿಸಿರುವ ಉಡುಪಿಯಿಂದ ನಾಲ್ಕು ಮೈಲಿ ದೂರದಲ್ಲಿದೆ. ಸುವರ್ಣನದಿ ಮತ್ತು ಎಣ್ಣೆ ಹೊಳೆಯ ಸಂಗಮ. ಈ ಸಂಗಮದ ಒಂದು ದಡ ಕಲ್ಯಾಣಪುರ ಮತ್ತೊಂದು ದಡವೇ ಶ್ರೀಕ್ಷೇತ್ರ ಭದ್ರಗಿರಿ.

ಇದು ಉಡುಪಿಯ ಬೈಕಾಡಿ ಗ್ರಾಮದ ಒಂದು ಬಡಾವಣೆ. ಇಲ್ಲಿ ಭಕ್ತರ ಅಭೀಪ್ಸಗಳನ್ನು ನೆರವೇರಿಸುವ ಶ್ರೀ ಕಾಮೇಶ್ವರನ ದೇವಸ್ಥಾನವಿದೆ. ವರ್ಷಕ್ಕೊಮ್ಮೆ ಸಂಭ್ರಮದ ದೀಪೋತ್ಸವ. ಭಜನೆ ಸತ್ಸಂಗಾದಿ ಕಾರ್ಯಕ್ರಮಗಳೂ, ಮಹಾ ಶಿವರಾತ್ರಿಯ ದಿನದಂದು ಅಹರ್ನಿಶಿ ಅಖಂಡ ಭಜನೆ ಕೀರ್ತನಾದಿ ಸತ್ಸಂಗಗಳೂ ವಿಶೇಷವಾಗಿ ನಡೆಯುತ್ತದೆ. ಅಷ್ಟೇ ಅಲ್ಲದೆ ಪುರಾತನವಾದ ವಿಠಲನ ದೇವಸ್ಥಾನವೂ ಇಲ್ಲಿದ್ದು ಭದ್ರಗಿರಿಯ ನಿವಾಸಿಗಳ ಆರಾಧ್ಯಮೂರ್ತಿ ಯಾಗಿ ''ಯೋಗಾ ವಿಠಲ''ನೆನಿಸಿ ಮೆರೆಯುತ್ತಿದ್ದಾನೆ.

ಬಡಗು ತಿಟ್ಟಿನ ಯಕ್ಷಗಾನ ಕಲೆಯ ತವರೂರಾದ ಬ್ರಹ್ಮಾವರಕ್ಕೆ ತೀರ ಸಮೀಪವಾದ ಭದ್ರಗಿರಿಯಲ್ಲೂ ಯಕ್ಷಗಾನ ಕಲೆ ಸಾಕಷ್ಟು ಪಸರಿಸಿದ್ದು ಇಲ್ಲಿನ ಅನೇಕ ಕುಟುಂಬಗಳ ಯುವಕರು ಇದರಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ಬೆಳಗುತ್ತಿದ್ದರು.

ಇಂಥ ಒಂದು ಕುಟುಂಬ ಭದ್ರಗಿರಿಯ ವೆಂಕಟರಮಣ ಪೈ ಹಾಗೂ ರುಕ್ಮಿಣಿಯಮ್ಮ ನವರದ್ದು. ಗೌಡ ಸಾರಸ್ವತ ಬ್ರಾಹ್ಮಣ ದಂಪತಿಗಳು. ಇವರು ಮೂಲತ ಸಂತೆಕಟ್ಟೆಯವರು. ಇವರ ಮನೆದೇವರು ಮೂಲ್ಕಿಯ ಶ್ರೀ ನೃಸಿಂಹದೇವರು. ಸಣ್ಣದಾದ ವ್ಯಾಪಾರ ವೃತ್ತಿಯಿಂದ ಸರಳ ಜೀವನ ನಡೆಸುತ್ತಿದ್ದು ಶ್ರೀ ನೃಸಿಂಹ ದೇವರ ಅಂತರಂಗ ಭಕ್ತರಾಗಿ ಸೇವೆ ನಡೆಸುತ್ತಿದ್ದರು. ಮುಂದೆ ಶ್ರೀ ನೃಸಿಂಹ ದೇವರ ಆದೇಶದಂತೆ ಭದ್ರಗಿರಿಗೆ ಬಂದು ನೆಲೆಸಿ ಅಲ್ಲಿನ ವೀರ ವಿಠಲನ ಆರಾಧಕರಾದರು. ಅವನ ಅನುಗ್ರಹದಿಂದ ಈ ದಂಪತಿಗಳಿಗೆ ಐವರು ಗಂಡುಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳು ಜನಿಸಿದರು. (ಈ ಮೊದಲೇ ಇವರು ಸಂತೆಕಟ್ಟೆಯಲ್ಲಿದ್ದಾಗ್ಗೆ

ಒಂದು ಗಂಡು ಎರಡು ಹೆಣ್ಣು ಮಕ್ಕಳು ಜನಿಸಿ ಅದರಲ್ಲಿ ಮೊದಲಿನ ಹೆಣ್ಣು ಮತ್ತು ಗಂಡು ಮಗು ಅಕಾಲ ಮರಣಕ್ಕೀಡಾದರೆಂದು ತಿಳಿದು ಬರುತ್ತದೆ.)

ಈಗ ಜನಿಸಿದ ಐವರು ಗಂಡುಮಕ್ಕಳಲ್ಲಿ ನರಸಿಂಹ ಪೈ ಹಿರಿಯರು. ಅವರ ನಂತರ ಅಚ್ಯುತ ಪೈ, ಕೇಶವ ಪೈ, ಸರ್ವೋತ್ತಮ ಪೈ ಹಾಗೂ ವಿಠಲ ಪೈ ಅಲ್ಲದೆ ಪ್ರೇಮಾಬಾಯಿ ಮತ್ತು ವಿಮಲಾಬಾಯಿ ಅಂತ ಇಬ್ಬರು ಹೆಣ್ಣುಮಕ್ಕಳು. ಇವರಲ್ಲಿ ಹಿರಿಯರಾದ ನರಸಿಂಹ ಪೈಯವರೂ ಸಹ ಅತ್ಯಂತ ಚಿಕ್ಕವಯಸ್ಸಿನಲ್ಲೇ ಹರಿಪಾದ ಸೇರಿದರು. ಹಾಗಾಗಿ ಈಗಿರುವ ಭದ್ರಗಿರಿ ಸಹೋದರರಲ್ಲಿ ಅಚ್ಯುತ ಪೈಯವರೇ ಹಿರಿಯರು.

ವೆಂಕಟರಮಣ ಪೈಯವರದು ಆ ಕಾಲಕ್ಕೆ ಸಾಕಷ್ಟು ದೊಡ್ಡ ಕುಟುಂಬವೇ! ಸಾಧಾರಣ ವಾದ ವ್ಯಾಪಾರದಿಂದ ಬರುತ್ತಿದ್ದ ವರಮಾನ ಸಂಸಾರ ತೂಗುವಷ್ಟರ ಮಟ್ಟಿಗಿತ್ತು. ಆದರೂ ಪೈಯವರು ಮಕ್ಕಳಿಗೆ ಸಾಕಷ್ಟು ವಿದ್ಯಾಭ್ಯಾಸ ಕೊಡಿಸಿದರು. ಇದಕ್ಕೋಸ್ಕರ ಅವರು ಉಡುಪಿಗೆ ಬಂದು ನೆಲೆಸಿದರು. ಲೌಕಿಕ ವಿದ್ಯಾಭ್ಯಾಸದ ಜೊತೆ ಜೊತೆಗೇ ಸಂಗೀತ, ಯಕ್ಷಗಾನ ಕಲೆಯ ಬಗ್ಗೆಯೂ ಸಾಕಷ್ಟು ಶಿಕ್ಷಣ ದೊರೆಯಿತು. ಇದರಲ್ಲಿ ಅಚ್ಯುತ ಪೈ ಸಾಕಷ್ಟು ನಿಷ್ಣಾತರಾಗಿ ಉಡುಪಿಯ ಸುತ್ತ ಮುತ್ತಲ ಪ್ರದೇಶಗಳಲ್ಲಿ ಉತ್ತಮ ಯಕ್ಷಗಾನ ಪಟುವೆನಿಸಿಕೊಂಡಿದ್ದರು.

## ಹರಿಕಥಾ ಕ್ಷೇತ್ರಕ್ಕೆ ಪದಾರ್ಪಣೆ

ಅಚ್ಯುತ ಪೈಯವರು ಹರಿಕಥಾ ಕ್ಷೇತ್ರಕ್ಕೆ ಕಾಲಿರಿಸಿದ್ದೂ ಒಂದು ಆಕಸ್ಮಿಕವೇ. ೧೯೫೧ರ ಮಹಾಶಿವರಾತ್ರಿಯ ದಿನ, ಭದ್ರಗಿರಿಯ ಕಾಮೇಶ್ವರನ ಸನ್ನಿಧಿಯಲ್ಲಿ ಆಗಿನ ಪ್ರಸಿದ್ಧ ವಿದ್ವಾಂಸರೊಬ್ಬರ ಶಿವ ಹರಿಕಥೆ ಏರ್ಪಾಡಾಗಿತ್ತು. ನಿಗದಿತ ಸಮಯ ಮೀರಿದರೂ ದಾಸರ ಸುಳಿವಿಲ್ಲ. ಕಾರ್ಯಕರ್ತರು-ಸಂಚಾಲಕರು ಕಂಗಾಲಾಗಿದ್ದರು. ಆದರೆ ಉತ್ಸಾಹೀ ಯುವಕರು ಧೃತಿಗೆಡಲಿಲ್ಲ. ಈಗಾಗಲೇ ಯಕ್ಷಗಾನ ತಾಳಮದ್ದಳೆಯಲ್ಲಿ ಸಾಕಷ್ಟು ಪ್ರಭಾವೀ ಯುವಕನಾಗಿದ್ದ ಅಚ್ಯುತ ಪೈಯನ್ನು ಹಿಡಿದು ಒಲಿಸಿ ಹುರಿದುಂಬಿಸಿ ಸಭೆಗೆ ಕರೆತಂದರು. ಯಕ್ಷಗಾನ ಕಲೆಯಲ್ಲಿ ನುರಿತವನಾದರೂ ಈ ಹುಡಗನಿಗೆ ಹರಿಕಥೆ ಕೇಳಿ ಪರಿಚಯವಿತ್ತೇ ಹೊರತು ಕಥೆ ಮಾಡಿ ಅನುಭವವಿರಲಿಲ್ಲ. ಆದರೂ ಬಿಸಿರಕ್ತದ ಉತ್ಸಾಹ. ಆಗ ಇವರಿಗೆ ಇನ್ನೂ ೧೮ ವರ್ಷ. ಒಂದು ಕೈ ನೋಡೇ ಬಿಡೋಣವೆಂದು ಈ ಮಹಾ ಪ್ರಯೋಗಕ್ಕೆ ಒಪ್ಪಿಯೇ ಬಿಟ್ಟರು. ಯಾವ ಪೂರ್ವ ಸಿದ್ಧತೆಯೂ ಇಲ್ಲದೆ ಅಂದು ಕಾಮೇಶ್ವರನ ಮೇಲೆ ಸಂಪೂರ್ಣ ಭಾರ ಹಾಕಿ ಕಥೆ ನಡೆಸಿಯೇ ಬಿಟ್ಟರು. ಬಂದಂಥ ಶ್ರೋತೃಗಳು ಮೂಕ ವಿಸ್ಮಿತರಾಗಿ ಹುಡುಗನ ದಾರ್ಷ್ಟ್ಯಕ್ಕೆ,

ರೂಪಕ್ಕೆ ಮೇಲಾಗಿ ಆತನ ಗಾಯನಕ್ಕೆ ಮಾರುಹೋದರು. ಯಾರು ಈ ಹುಡುಗ? ಪರಿಚಯವಿಲ್ಲದವರು ಕೇಳಿದರೆ ಪರಿಚಯವಿದ್ದವರು ''ನಮ್ಮ ವೆಂಕಟರಮಣ ಪೈಗಳವರ ಮಗ ಅಚ್ಯುತ ಅಲ್ವೋ'' ಎಂದು ಉದ್ಗರಿಸಿದರು. ಬಂದವರೆಲ್ಲ''ಏನು ಕಂಠ ಮಾರಾಯ್ರೆ, ಎಂಥ ಗಾಯನ, ಮಾತೋ ಚೊಕ್ಕ; ಈ ಹುಡುಗ ಒಳ್ಳೆ ಕೀರ್ತನಕಾರನಾಗ್ತಾನೆ. ಇವನಿಗೆ ಉಜ್ವಲ ಭವಿಷ್ಯಉಂಟು'' ಎಂದೆಲ್ಲ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಹೀಗೆ ತಮಗೇ ಅರಿವಿಲ್ಲದಂತೆ ಅಕಸ್ಮಾತ್ತಾಗಿ ಕೀರ್ತನ ರಂಗ ಪ್ರವೇಶಿಸಿದ ಈ ಹುಡುಗ ಇಂದು ಕೀರ್ತನ ಕ್ಷೇತ್ರದ ಮೇರುವಾಗಿ; ಅನಭಿಷಕ್ತ ಸಾಮ್ರಾಟರಾಗಿ; ಕೀರ್ತನಕಾರರೆಂದರೆ ಸಂತ ಭದ್ರಗಿರಿ ಅಚ್ಯುತದಾಸರು ಎಂಬ ಕೀರ್ತಿಗೆ ಭಾಜನರಾಗಿ ಇಡೀ ರಂಗಕ್ಕೇ 'ದೊಡ್ಡಣ್ಣ'ನಾಗಿ ಮೆರೆದಿದ್ದಾರೆ.

## ಬಾಲ್ಯ-ವಿದ್ಯಾಭ್ಯಾಸ

ಅಚ್ಯುತದಾಸರ ಜನನ ೧೯೩೨ರ ಮಾಘ ಬಹುಳ ದ್ವಿತೀಯಾದಂದು. ಹಿರಿಯ ಮಗನಿಗೆ ಕುಲದೇವರ ಹೆಸರನ್ನಿಟ್ಟಿದ್ದರು ನರಸಿಂಹನೆಂದು. ಈ ಮಗುವಿಗೆ ಅಚ್ಯುತನೆಂದು ನಾಮಕರಣವಾಯಿತು. ಬ್ರಹ್ಮಾವರ, ಭದ್ರಗಿರಿ ಕಲ್ಯಾಣಪುರಗಳು ಯಕ್ಷಗಾನ, ಸಂಗೀತ, ಸಾಹಿತ್ಯಗಳ ತೌರೂರು, ಭಜನೆ, ಪುರಾಣ, ಪ್ರವಚನಗಳು ಇಲ್ಲಿ ದಿನನಿತ್ಯ ನಡೆಯುವ ಪರಿಪಾಠ. ಈ ಪರಿಸರದಲ್ಲೇ ಬೆಳೆದ ಅಚ್ಯುತ ಪೈ ಸಹಜವಾಗಿ ಕಲೆ-ಸಾಹಿತ್ಯದ ಕಡೆಗೆ ಒಲಿದರು. ಯಕ್ಷಗಾನ ಭಾಗವತಿಕೆ, ಭಜನೆಯಲ್ಲಿ ಪಾಲ್ಗೊಳ್ಳುವಿಕೆ ಮುಂತಾದವುಗಳಿಂದ ತಮ್ಮಲ್ಲಿ ಸುಪ್ತವಾಗಿದ್ದ ಕಲಾಶ್ರೀಮಂತಿಕೆಯನ್ನು ಉಜ್ಜೀವನಗೊಳಿಸಿದರು. ಹೀಗಾಗಿ ಇವರ ಲೌಕಿಕ ವಿದ್ಯಾಭ್ಯಾಸ ಪ್ರಾಥಮಿಕ ಶಿಕ್ಷಣಕ್ಕೇ ಸೀಮಿತವಾಗಿ ಸದಾ ಪಾರಮಾರ್ಥ ಚಿಂತನೆಯಲ್ಲಿಯೇ ತೊಡಗಿ ಸ್ವಾಧ್ಯಾಯ ನಿರತರಾದರು. ಅಪಾರವಾದ ಜ್ಞಾನಭಂಡಾರ ಬೆಳೆಸಿಕೊಂಡರು.

ಅಣ್ಣ ನರಸಿಂಹ ಪೈ ಸಂಗೀತ ಕಲಿಯುವಾಗ ತಾವೂ ತಮ್ಮ ಸಹೋದರ ಕೇಶವನೊಡಗೂಡಿ ಅಲ್ಲಿ ಕುಳಿತು ಕೇಳುವುದು ಅಭ್ಯಸಿಸುವುದು ಹೀಗೆ ಸಂಗೀತ ಕಲೆಯಲ್ಲೂ ನಿಷ್ಣಾತರಾದರು. ಸಂಗೀತಕ್ಕೆ ಸಂಬಂಧಿಸಿದ ಶಾಸ್ತ್ರಗ್ರಂಥಗಳ ಅಧ್ಯಯನವನ್ನು ಆಳವಾಗಿ ಮಾಡಿ ಅದರಲ್ಲೂ ಸಾಕಷ್ಟು ಪರಿಣತಿ ಗಳಿಸಿದರು. ಉತ್ತಮ ಕಂಠಶ್ರೀ, ರಾಗ ಮಾಧುರ್ಯ ಹೊಂದಿದ್ದ ಅಚ್ಯುತ ಪೈಗಳ ಹಾಡುಗಾರಿಕೆಗೆ ಅಲ್ಲಿನ ಜನ ಮರುಳಾಗಿದ್ದರು. ೧೯೫೧ರಲ್ಲಿ ಮಹಾಶಿವರಾತ್ರಿಯಂದು ಕೀರ್ತನ ರಂಗಕ್ಕೆ ಪ್ರಪ್ರಥಮವಾಗಿ ಯಾವ ಪೂರ್ವಸಿದ್ಧತೆ ಇಲ್ಲದೆ ಪದಾರ್ಪಣ ಮಾಡಿದ ಬಾಲಕ ಅಚ್ಯುತ ಪೈ ಅಲ್ಲಿಂದ ಮುಂದೆ ಹಿಂದಿರುಗಿ ನೋಡಲೇ ಇಲ್ಲ. ಮುಂದಿನ ಭವಿಷ್ಯದತ್ತ ದಾಪುಗಾಲು

ಹಾಕುತ್ತ ಕೀರ್ತಿ ಶಿಖರದ ಮೇರುವನ್ನು ತಲುಪಿದರು. ಭದ್ರಗಿರಿ ಅಚ್ಯುತ ಪೈ ಅಚ್ಯುತದಾಸರಾದರು.

## ದಾಸದೀಕ್ಷೆ

ಅಚ್ಯುತದಾಸರು ಆಕಸ್ಮಿಕವಾಗಿ ಕೀರ್ತನ ರಂಗ ಪ್ರವೇಶ ಮಾಡಿದರು. ಅದರಲ್ಲಿ ಹೆಸರನ್ನು ಗಳಿಸಿದರು. ಆದರೂ ಗುರ್ವಾನುಗ್ರಪೂರ್ವಕ ವಿದ್ಯುಕ್ತವಾಗಿ ದಾಸದೀಕ್ಷೆ ಪಡೆದು ಹರಿದಾಸ ನಾಗಬೇಕೆಂದು ಉತ್ಕಟಾಂಕ್ಷೆ ಅವರಲ್ಲಿತ್ತು. ಇದಕ್ಕಾಗಿ ತಕ್ಕ ಸಂದರ್ಭಕ್ಕೆ ಕಾಯುತ್ತಿದ್ದರು. ಅದೂ ಭಗವದನುಗ್ರಹದಿಂದ ಕೂಡಿ ಬಂತು. ಹರಿಕಥಾರಂಗಕ್ಕೆ ಪದಾರ್ಪಣೆ ಮಾಡಿದ ದಿನದಿಂದ ಎರಡು ವರ್ಷದ ನಂತರ ಇವರು ಕಾಯುತ್ತಿದ್ದ ದಿನ ಬಂದೇ ಬಂತು.

ಶ್ರೀಮದಾಚಾರ್ಯರೆನಿಸಿದ್ದ ಶ್ರೀಮನ್ಮಧ್ವರ ಪರಂಪರೆಯ ಔತ್ತರೇಯ ಪೀಠಗಳಲ್ಲಿ ಒಂದಾದ ಶ್ರೀ ಕಾಶೀಮಠ ಪರಂಪರೆಯಲ್ಲಿ ಬಂದ ಶ್ರೀಮತ್ಸುಧೀಂದ್ರ ತೀರ್ಥ ಶ್ರೀ ಪಾದಂಗಳವರು ಚಾತುರ್ಮಾಸ್ಯ ವ್ರತದ ಅಂಗವಾಗಿ ಕೋಟೇಶ್ವರದ ಶ್ರೀ ಪಟ್ಟಾಭಿರಾಮ ದೇವಸ್ಥಾನದಲ್ಲಿ ಬೀಡು ಬಿಟ್ಟಿದ್ದರು. ಅಲ್ಲಿ ಪ್ರತಿದಿನ ನಡೆಯುತ್ತಿದ್ದ ಸತ್ಸಂಗದಲ್ಲಿ ಅಚ್ಯುತದಾಸರ ಹರಿಕಥೆ ಏರ್ಪಾಡಾಗಿತ್ತು. ಕಾರ್ಯಕ್ರಮಕ್ಕಾಗಿ ಆಗಮಿಸಿದ್ದ ದಾಸರು ಶ್ರೀಗಳವರ ದರ್ಶನ ಪಡೆದು ತಮ್ಮ ಮನದಾಕಾಂಕ್ಷೆಯನ್ನು ನಿವೇದಿಸಿದರು. ತಾವು ಹರಿಗುರು ಸೇವಕನಾಗಿ ದಾಸಪಂಥವನ್ನು ಹಿಡಿದು ವಿದ್ಯುಕ್ತವಾಗಿ ಹರಿದಾಸನಾಗುವಂತೆ ಅನುಗ್ರಹಿಸಬೇಕೆಂದು ಬೇಡಿದರು. ಶ್ರೀಗಳಾದರೂ ದಾಸರಿಗೆ ಮಠದಲ್ಲಿ ಆಶ್ರಯವಿತ್ತು, ಕಾಲಕಾಲಕ್ಕೆ ತತ್ವರಹಸ್ಯ, ಧರ್ಮಾಚರಣೆ, ಕೀರ್ತನ ಪದ್ಧತಿಯ ರಹಸ್ಯ, ಸಾಧನ ಮಾರ್ಗಗಳನ್ನು ಬೋಧಿಸಿ, ನಿತ್ಯವೂ ತಮ್ಮ ಉಪಾಸನಾ ದೇವರು ಶ್ರೀ ವ್ಯಾಸ ರಘುಪತಿಯ ಸನ್ನಧಿಯಲ್ಲಿ ಕೀರ್ತನೆ ಮಾಡಿಸಿ ಅದರಲ್ಲಿ ಕಂಡುಬಂದ ಲೋಪದೋಷಗಳನ್ನು ತಿದ್ದಿ ಆಶೀರ್ವದಿಸಿ ಅವರಿಗೆ ವಿದ್ಯುಕ್ತವಾಗಿ ದಾಸದೀಕ್ಷೆ ನೀಡಿ ''ಅಚ್ಯುತದಾಸ''ನೆಂದು ಕರೆದರು. ಹೀಗೆ ಗುರುಗಳಿಂದ ಅನುಗ್ರಹಿತರಾದ ದಾಸರು ಅಂದಿನಿಂದ ಇಂದಿನವರೆಗೂ ಶ್ರೀಗಳವರ ಚಾತುರ್ಮಾಸ್ಯ ವ್ರತದ ಸಂದರ್ಭದಲ್ಲಿ ಅವರು ಎಲ್ಲೇ ಮೊಕ್ಕಾಂ ಹೂಡಿದರೂ ಅಲ್ಲಿ ತಾವೂ ಉಪಸ್ಥಿತರಿದ್ದು ಹರಿಕಥಾ ಸೇವೆ ನಡೆಸುವ ಪರಿಪಾಠವನ್ನಿಟ್ಟುಕೊಂಡಿದ್ದಾರೆ.

## ಅಂಕಿತ ಪ್ರದಾನ

ಸಾಹಿತ್ಯದಲ್ಲೂ ಸಾಕಷ್ಟು ಅಧ್ಯಯನ ನಡೆಸಿದ್ದ ಅಚ್ಯುತದಾಸರು ಭಗವಂತನನ್ನು ಕುರಿತು ಅನೇಕ ಕೃತಿಗಳನ್ನು ರಚಿಸುತ್ತಿದ್ದರೂ ದಾಸಪಂಥದ

ಸಂಪ್ರದಾಯದಂತೆ 'ಅಂಕಿತ' ವಿಲ್ಲದೆ ಕೃತಿರಚನ ಕೂಡದು ಎಂದು ನಂಬಿದ್ದವರು. ಆದರೆ ಇವರ ಪೂರ್ವಜರು ಯಾರೂ ಹೀಗೆ ಅಂಕಿತ ಪಡೆದವರಿರಲಿಲ್ಲವಾದ್ದರಿಂದ ಇದು ಗುರ್ವಾನುಗ್ರಹ ಮೂಲಕವೇ ಆಗಬೇಕೆಂದು ಮನಗಂಡು ಅದಕ್ಕಾಗಿಯೂ ಸಮಯವನ್ನು ಎದುರು ನೋಡುತ್ತಿದ್ದರು. ದೈವಾನುಗ್ರಹ ಆ ದಿನವೂ ಬಂದೇ ಬಂದಿತು. ದಾಸದೀಕ್ಷೆ ಪಡೆದ ಮೂರನೇ ವರ್ಷಕ್ಕೆ ಅಂದರೆ ೧೯೫೬ರಲ್ಲಿ ಕಾಶೀಮಠದ ಶ್ರೀಗಳವರು ಉಡುಪಿಯಲ್ಲಿ ಚಾತುರ್ಮಾಸ್ಯ ವ್ರತಕ್ಕಾಗಿ ಮೊಕ್ಕಾಂ ಹೂಡಿದರು. ಆ ಹೊತ್ತಿಗೆ ಇವರ ಕುಟುಂಬ ಸಹ ಅಂದರೆ ವೆಂಕಟರಮಣ ಪೈ ಅವರ ಸಂಸಾರ-ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಉಡುಪಿಗೇ ಬಂದಿದ್ದರು. ಉಡುಪಿಯ ಕಾಲೇಜಿನಲ್ಲಿ ಅಚ್ಯುತದಾಸರ ಸಹೋದರರಾದ ಕೇಶವ ಪೈ ಹಾಗೂ ಸರ್ವೋತ್ತಮ ಪೈ (ಲೇಖಕ) ಓದುತ್ತಿದ್ದರು.

ಈ ಚಾತುರ್ಮಾಸ್ಯದ ಸಂದರ್ಭದಲ್ಲಿ ಅಚ್ಯುತದಾಸರು ಶ್ರೀಗಳವರ ಸಮ್ಮುಖದಲ್ಲಿ ನಾಲ್ಕು ತಿಂಗಳ ಕಾಲ ಸತತವಾಗಿ ಕೀರ್ತನ ರೂಪೀ ಮಹಾಭಾರತ ಪ್ರವಚನ ನಡೆಸಿದರು. ಮಂಗಳದ ದಿನ ಬೆಳಿಗ್ಗೆ ತಮ್ಮ ಪ್ರಾತರ್ವಿಧಿಗಳನ್ನು ಮುಗಿಸಿ ಶ್ರೀಗಳವರಿಗೆ ಅಡ್ಡಬಿದ್ದು ತಮಗೆ ಅಂಕಿತ ಪ್ರದಾನ ಮಾಡುವಂತೆ ನಿವೇದಿಸಿಕೊಂಡರು. ಅದರಂತೆ ಸ್ವಾಮಿಗಳು ಅವರಿಗೆ ಚಕ್ರಾಂಕನಗೈದು ಸಾಲಿಗ್ರಾಮ ಮುಷ್ಟಿಕೆಗಳನ್ನೂ ತುಲಸೀಮಾಲೆಯನ್ನು ಕೊಟ್ಟು, ರಕ್ತಾವಸನ, ಶಹಲು ಜೋಡಿಯ ಮಠ ಮರ್ಯಾದೆಯೊಂದಿಗೆ ಸ್ವರ್ಣಪದಕ ನೀಡಿ ''ಕೀರ್ತನಾಗ್ರೇಸರ'' ಎಂಬ ಬಿರುದಿನೊಂದಿಗೆ ನೆರೆದಿದ್ದ ಸರ್ವ ಶ್ರೋತೃಗಳ ಸಮ್ಮುಖದಲ್ಲಿ ''ಮೂಲನಾರಾಯಣ'' ಎಂಬ ಅಂಕಿತ ಪ್ರದಾನ ಮಾಡಿ ಹರಸಿದರಂತೆ. ಆ ಸಂದರ್ಭದಲ್ಲಿ ಮೊದಲೇ ಸಾತ್ವಿಕ ಕಳೆಯಿಂದಿದ್ದ ದಾಸರ ಮುಖ ಅದರ ಇಮ್ಮಡಿಯಷ್ಟು ವರ್ಚಸ್ಸಿನಿಂದ ಬೆಳಗಿತು. ಹೀಗೆ ಗುರುಗಳ ಸಂಪೂರ್ಣಾನುಗ್ರಹವನ್ನು ಪಡೆದ ಅಚ್ಯುತದಾಸರ ಲೇಖನಿಯಿಂದ 'ಮೂಲನಾರಾಯಣ' ಅಂಕಿತದಲ್ಲಿ ಪುಂಖಾನುಪುಂಖವಾಗಿ ಸಹಸ್ರಾರು ಸಂಖ್ಯೆಯಲ್ಲಿ ಕೃತಿಗಳು ಮೂಡಿಬಂದವು. ಈ ಹೊತ್ತಿಗೆ ಅವರಿಗೆ ಕಂಕಣ ಬಲವೂ ಕೂಡಿ ಬಂದಿದ್ದು ವಿವಾಹವೂ ಆಗಿತ್ತು. ಮಂಗಳೂರಿನ ಶ್ರೀ ವಾಮನ ನಾಯಕರ ಮಗಳು ಸೌಭಾಗ್ಯವತಿ ಶ್ರೀಮತಿ ಎಂಬ ಕನ್ಯೆಯೊಡನೆ ಭದ್ರಗಿರಿಯ ವೀರವಿಠಲನ ಸನ್ನಿಧಿಯಲ್ಲಿ ವಿವಾಹ ನೆರವೇರಿ ದಾಸರು ಗೃಹಸ್ಥಾಶ್ರಮ ಧರ್ಮವನ್ನು ಸ್ವೀಕರಿಸಿದರು. ಕಾಲಕ್ರಮದಲ್ಲಿ ಅವರಿಗೆ ಮೂವರು ಗಂಡುಮಕ್ಕಳೂ, ನಾಲ್ವರು ಹೆಣ್ಣುಮಕ್ಕಳು ಜನಿಸಿ ಸಂತಾನಾಭಿವೃದ್ಧಿಯೂ ಆಯಿತು.

ತಮ್ಮ ಕೇಶವ ಪೈ ಸಹ ಹರಿಕಥಾ ಕ್ಷೇತ್ರದಲ್ಲಿ ಅದ್ವಿತೀಯ ಪಾಂಡಿತ್ಯ ಗಳಿಸಿ ಕೇವಲ ದಕ್ಷಿಣ ಕನ್ನಡ ಜಿಲ್ಲೆಯೇ ಅಲ್ಲದೆ ಕರ್ನಾಟಕ, ಆಂಧ್ರ, ತಮಿಳು ನಾಡು, ಮಹಾರಾಷ್ಟ್ರಗಳಲ್ಲಿ ಸಂಚರಿಸಿ ಖ್ಯಾತರಾಗಿದ್ದರು. ಹೀಗಾಗಿ ತಮ್ಮ ಕಾರ್ಯಕ್ಷೇತ್ರ ವಿಸ್ತರಣೆಗಾಗಿ ಅವರು ಬೆಂಗಳೂರಿಗೆ ವಲಸೆ ಬಂದರು. ಅಚ್ಯುತದಾಸರಾದಿಯಾಗಿ ಎಲ್ಲರೂ ಕಲ್ಯಾಣನಗರಿಗೆ ಬಂದು ವಲಸೆ ಹೂಡಿದರು. ಆ ಹೊತ್ತಿಗೆ ಅಚ್ಯುತದಾಸರೂ ಖ್ಯಾತನಾಮರಾಗಿ ಬೆಂಗಳೂರಿನ ಅನೇಕ ಬಡಾವಣೆಗಳಲ್ಲಿ ಇವರ ಕಾರ್ಯಕ್ರಮಗಳು ನಡೆಯುತ್ತಿದ್ದವು. ಕೆಲವೊಮ್ಮೆ ಅಣ್ಣ ತಮ್ಮಂದಿರಿಬ್ಬರೂ ಒಂದೇ ವೇದಿಕೆಯಲ್ಲಿ ಕಾರ್ಯಕ್ರಮ ನೀಡಿ ಅಶ್ವಿನೀದೇವತೆಗಳಂತೆ ಕಂಗೊಳಿಸುತ್ತಿದ್ದರು. ತಮ್ಮ ಕೇಶವದಾಸರಿಗೆ ಅಣ್ಣನೆಂದರೆ ಅಪಾರ ಗೌರವ! ಅಲ್ಲದೆ ಗುರುಭಾವನೆ. ಇವರ ಕೀರ್ತನ ಕಲೆಯ ಮಾರ್ಗದರ್ಶಕರು. ಅಚ್ಯುತದಾಸರಿಗೆ ತಮ್ಮ ಕೇಶವನ ಮೇಲೆ ಅಪಾರ ಪ್ರೀತಿ. ಅಷ್ಟೇ ಅಲ್ಲ ''ಆತ ಹುಟ್ಟಿನಲ್ಲಿ ತಮ್ಮ ತಮ್ಮನಾದರೂ ಆಚರಣೆಯಲ್ಲಿ ಸರ್ವವಿಧದಲ್ಲೂ ನನಗಿಂತ ಮುಂದೆ ಇದ್ದಾನೆ. ಆ ವಿಚಾರದಲ್ಲಿ ಆತ ನನಗಿಂತ ಹಿರಿಯ'' ಎಂದು ಹೇಳುವುದಲ್ಲದೆ ತಮ್ಮ ಎಂಬ ಭಾವನೆಯಿಂದ ಅವರನ್ನು ನೋಡಲೇ ಇಲ್ಲ. ಕೇಶವದಾಸರನ್ನು ಎಂದು ಅವರು ಏಕವಚನದಲ್ಲಿ ಸಂಭೋಧಿಸಲಿಲ್ಲ. ಬಹುವಚನವನ್ನೇ ಪ್ರಯೋಗಿಸುತ್ತಿದ್ದರು. ಕೇಶವದಾಸರು ಹರಿಸಾಯುಜ್ಯವನ್ನೈದಿದ ಸಂದರ್ಭದಲ್ಲಿ,''ಎಲ್ಲ ವಿಚಾರದಲ್ಲೂ ನನಗಿಂತ ಮುಂದಿದ್ದ ಕೇಶವದಾಸರು ಇಲ್ಲಿಯೂ ನಮಗಿಂತ ಮುಂದೆ ಹೋದರು'' ಎಂದು ಕಂಬನಿ ಮಿಡಿದರು.

## ಭಾರತಾದ್ಯಂತ ಪ್ರವಾಸ

ಅಚ್ಯುತದಾಸರ ಕೀರ್ತಿ ದಿನದಿನಕ್ಕೆ ಊರಿಂದೂರಿಗೆ ಪಸರಿಸುತ್ತಾ ಅದು ಭಾರತಾದ್ಯಂತ ಹರಡಿತು. ಕಥಾ ಕಾರ್ಯಕ್ರಮಕ್ಕಾಗಿ ಆಹ್ವಾನಗಳ ಮಹಾಪೂರವೇ ಹರಿಯಿತು. ಆಂಧ್ರಪ್ರದೇಶ, ಮಹಾರಾಷ್ಟ್ರಗಳಿಂದ ಅಲ್ಲಿನ ಕನ್ನಡಿಗರಿಂದ ಅವರ ಮತೀಯ ಬಾಂಧವರಿಂದ ಆಹ್ವಾನಗಳು ಬಂದು ಮುಂಬಯಿಯಲ್ಲಿ ಅನೇಕ ಸಪ್ತಾಹ, ಪಾಕ್ಷಿಕ, ತಿಂಗಳ ಅವಧಿಯ ಕಾರ್ಯಕ್ರಮಗಳನ್ನು ನೀಡಿದರು. ಕನ್ನಡದಷ್ಟೇ ಕೊಂಕಣಿ, ಹಿಂದಿ, ಸಂಸ್ಕೃತ, ಮರಾಠೀ ಭಾಷೆಗಳಲ್ಲಿ ಪಾಂಡಿತ್ಯ-ಪ್ರಭುತ್ವ ಪಡೆದಿದ್ದ ದಾಸರು ಈ ಎಲ್ಲ ಭಾಷೆಗಳಲ್ಲೂ ಕಥೆ ಮಾಡುವ ಪ್ರಾವೀಣ್ಯತೆ ಪಡೆದಿದ್ದರು. ಕೇಶವದಾಸರು ಸ್ಥಾಪಿಸಿದ ದಾಸಾಶ್ರಮ ಅಂತರಾಷ್ಟ್ರೀಯ ಕೇಂದ್ರದ ಗೌರವಾಧ್ಯಕ್ಷರಾಗಿ ಇಂದೂ ಸೇವೆ ಸಲ್ಲಿಸುತ್ತಿದ್ದಾರೆ. ಕೇವಲ ಹರಿಕಥಾ ರಂಗಕ್ಕೇ ಅಲ್ಲದೆ ಸಾಹಿತ್ಯ ಕೃಷಿಯನ್ನೂ ಮಾಡಿ ಅನೇಕ ಗ್ರಂಥಗಳನ್ನೂ ಹೊರತಂದಿದ್ದಾರೆ. ಅದನ್ನು

ಪ್ರಕಾಶಿಸಿ ಪ್ರಕಟಿಸಲು ''ಭಾರತ ಜ್ಯೋತಿ ಪ್ರಕಾಶನ''ಎಂಬ ಪ್ರಕಾಶನ ಸಂಸ್ಥೆಯನ್ನೂ ಸ್ಥಾಪಿಸಿದ್ದಾರೆ.

ಕೀರ್ತನ ಕಲೆಯ ಪ್ರಚಾರಕ್ಕಾಗಿ, ಉತ್ತಮ ಕೀರ್ತನಕಾರರನ್ನು, ತಯಾರು ಮಾಡುವ ಸಲುವಾಗಿ ದಾಸಾಶ್ರಮದ ಆವರಣದಲ್ಲೇ ಕೀರ್ತನ ಮಹಾವಿದ್ಯಾಲಯವನ್ನು ಸ್ಥಾಪಿಸಿ ಆ ಮೂಲಕ ಅನೇಕ ಕೀರ್ತನಕಾರರನ್ನು ನಾಡಿಗೆ ನೀಡುವಲ್ಲಿ ಸಫಲರಾಗಿದ್ದಾರೆ. ಕೀರ್ತನಕಾರರನ್ನು ಸಂಘಟಿಸುವ ಸಲುವಾಗಿ ೧೯೬೪ರಲ್ಲಿ ಅಖಿಲ ಕರ್ನಾಟಕ ಕೀರ್ತನ ಕಲಾವಿದರ ಸಮ್ಮೇಳನವನ್ನು ನಡೆಸಿದ್ದೇ ಅಲ್ಲದೆ ಕೀರ್ತನ ಕಲಾ ಪರಿಷತ್ತನ್ನು ಸಹ ಸ್ಥಾಪಿಸಿದ್ದಾರೆ.

## ಕೃತಿ ರಚನೆಗಳು

'ಗೀತಾರ್ಥ ಚಿಂತನೆ' ಎಂಬ ಬೃಹತ್ ಸಂಪುಟವನ್ನು ಬರೆದು ಭಗವದ್ಗೀತಾ ಸಾರವನ್ನು ದಾಸರ ಕೀರ್ತನೆ-ಅಭಂಗಗಳ ಸಾಮರಸ್ಯದೊಂದಿಗೆ ಕೀರ್ತನ ಕಲೆಗೆ ಅನುಕೂಲವಾಗುವ ರೀತಿಯಲ್ಲಿ ಹೊರತಂದಿದ್ದಾರೆ.

''ಹರಿಕಥಾ ಪೂರ್ವರಂಗ''ಇವರ ಮತ್ತೊಂದು ಉತ್ಕೃಷ್ಟ ಕೃತಿ. ಕಥಾ ಕೀರ್ತನದ ಪ್ರಸಂಗಕ್ಕೆ ಪೂರ್ವಭಾವಿಯಾಗಿ ನೀಡುವ ಸಂದೇಶ ಹೇಗಿರಬೇಕು ಎಂಬ ವಿಷಯ ಇಲ್ಲಿ ಪ್ರತಿಪಾದಿತ ವಾಗಿದ್ದು ಇದೊಂದು ವಿಶ್ವಕೋಶವೆನಿಸಿದೆ.

ಇದಲ್ಲದೆ ''ಸಂತಗಾಥಾ'', ಮೂಲನಾರಾಯಣಂಕಿತದಲ್ಲಿ ಅನೇಕ ಕೃತಿಗಳನ್ನು ಸಹ ರಚಿಸಿದ್ದಾರೆ.

ಇವರ ಜೀವನದ ಮಹತ್ತರ ಸಾಧನೆಯೆಂದರೆ ಇವರಿಂದ ರಚಿತವಾದ 'ಹರಿಕಥಾಮೃತ ಸಿಂಧು'. ಇದು ಆರು ಸಂಪುಟಗಳ ಬೃಹದ್ಗ್ರಂಥ. ಹರಿಕಥಾರಂಗಕ್ಕೆ ಬೇಕಾಗುವಂಥ ಎಲ್ಲ ಸರಕುಗಳು ಇದರಲ್ಲಿ ಅಡಕವಾಗಿವೆ. ರಾಮಾಯಣ, ಮಹಾಭಾರತ, ಭಾಗವತಗಳ ಕಥಾನಕದ ಮಹಾಪೂರವೆ ಇದರಲ್ಲಿ ಪ್ರತಿಪಾದಿಸಲಾಗಿದ್ದು ಅನೇಕ ತತ್ವಸಂದೇಶಗಳು, ಉಪಕತೆಗಳು, ದಾಸಕೀರ್ತನೆಗಳು ದೃಷ್ಟಾಂತರೂಪಿಯಾಗಿ ಚಿತ್ರಿಸಲಾಗಿದೆ. ಇದರಲ್ಲಿ ಎರಡು ಸಂಪುಟಗಳು ಮಾತ್ರ ಪ್ರಕಟವಾಗಿದ್ದು ಉಳಿದ ನಾಲ್ಕು ಸಂಪುಟಗಳು ಮುದ್ರಣವಾಗಬೇಕಿದೆ.

ಇವರ ಅನೇಕ ಕೀರ್ತನೆಗಳು, ಯಕ್ಷಗಾನಗಳು, ಧ್ವನಿಸುರುಳಿ ರೂಪದಲ್ಲಿ ವೀಡಿಯೊ ಕ್ಯಾಸೆಟ್‌ಗಳಾಗಿ ಪ್ರಕಟವಾಗಿವೆ. ಕೊಂಕಣಿ ಭಾಷೆಯಲ್ಲಿ ರಚಿತವಾಗಿರುವ ಶ್ರೀಗುರು ಚರಿತಾಮೃತಮ್ ಇವರ ಮತ್ತೊಂದು ಬೃಹದ್ಗ್ರಂಥ.

## ಪ್ರಶಸ್ತಿ - ಗೌರವ - ಸಂಸ್ಮರಣ ಸಂಪುಟಗಳು

ಸಂತ ಭದ್ರಿಗಿರಿ ಅಚ್ಯುತದಾಸರು ದಾಸದೀಕ್ಷೆ ಪಡೆದು ೨೫ ವರ್ಷಗಳನ್ನು ಕಳೆದ ಸವಿನೆನಪಿಗಾಗಿ ಅವರ ಅಭಿಮಾನಿಗಳು, ಬಂಧು ವರ್ಗವೆಲ್ಲ ಸೇರಿ 'ಸಂತರ್ಪಣ' ಎಂಬ ಅಭಿನಂದನಾ ಸಂಪುಟವನ್ನು ಪ್ರಕಟಿಸಿದೆ. ಇದಲ್ಲದೆ ಇವರ ಐವತ್ತನೇ ಹುಟ್ಟುಹಬ್ಬದ ಸವಿನೆನಪಿಗಾಗಿ 'ಸ್ವರ್ಣ ಸಂಚಿಕೆ' ಎಂಬ ಸಂಸ್ಕರಣ ಸಂಪುಟವನ್ನು ಹೊರತರಲಾಯಿತು. ಈ ಎರಡೂ ಸಂಪುಟಗಳಲ್ಲಿ ಅವರ ಸಾಧನೆ - ಸಂಘಟನೆಯ ಸಮಗ್ರ ಪರಿಚಯವನ್ನು ಮಾಡಿಕೊಡಲಾಗಿದೆ. ಸಂತ ಅಚ್ಯುತದಾಸರು ಕೇವಲ ಕೀರ್ತನಕಾರರಾಗಿಯೇ ಉಳಿಯಲಿಲ್ಲ, ವ್ಯಾಸಕೂಟ -ದಾಸ ಕೂಟಗಳ ಹರಿಕಾರರಾದವರು. ವ್ಯಾಸಕೂಟದ ಮುಖಾಂತರ ಪುಣ್ಯಕಥಾ ನಿರೂಪಣೆ ಮತ್ತು ತತ್ತ್ವಜ್ಞಾನಗಳ ಪ್ರಸಾರ ದಾಸಕೂಟದ ಸಂಪ್ರದಾಯದಂತೆ ಗುರು ಮುಖೇನ ಅಂಕಿತ ಪಡೆದು ದೇವರನಾಮಗಳ ರಚನೆ, ಸದಾಚಾರ ಸಂಹಿತೆ - ನಿತ್ಯ ದೇವತಾರಾಧನೆ ಹಾಗೂ ವೈದಿಕ ಮತಾವಲಂಬಿಗಳಾಗಿ ಇತರರಿಗೆ ಸೂಕ್ತ ಮಾರ್ಗದರ್ಶಿಗಳಾದರು.

## ಸರ್ವಮತ ಸಮನ್ವಯತೆ

ಕೇವಲ ಗೌಡಸಾರಸ್ವತ ಬ್ರಾಹ್ಮಣ ವರ್ಗದ ಮಠ ಮಾನ್ಯತೇಯೇ ಅಲ್ಲದೆ ಶೃಂಗೇರಿ ಶಾರದಾ ಪೀಠ, ಆದಿಚುಂಚನಗಿರಿ ಸಂಸ್ಥಾನ, ವೀರಶೈವ ಪಂಥಕ್ಕೆ ಸೇರಿದಂಥ ಮೂರು ಸಾವಿರ ಮಠ, ಶಿವರಾತ್ರೀಶ್ವರ ಮಠ, ಮುರುಘರಾಜೇಂದ್ರ ಮಠ, ಸೂತ್ತೂರು ಮಠ, ಅಲ್ಲದೆ ಭಕ್ತಿಪಂಥಕ್ಕೆ ಸೋಪಾನವೆನಿಸಿರುವಂಥ ಶ್ರೀರಾಮಕೃಷ್ಣ ಮಠಗಳ ಹಾಗೂ ವಿಶ್ವ ಹಿಂದೂಪರಿಷತ್ತು, ದಿವ್ಯಜೀವನ ಸಂಘ ಮುಂತಾಗಿ ಸರ್ವಮಠಗಳಿಂದ ಸಹ ಮಾನ್ಯತೆ ಪಡೆದ ಏಕೈಕ ಸಂತರು ಭದ್ರಗಿರಿ ಅಚ್ಯುತದಾಸರು.

ದಾಸರು ನಿಷ್ಠಾವಂತರಾಗಿ ಮಾಧ್ವ ಮತಾವಲಂಬಿಗಳಾದರೂ ಭಾರತದ ಎಲ್ಲ ಮತಗಳ ಬಗ್ಗೆ ಸಮತಾಭಾವ ಹೊಂದಿದವರು. ಸರ್ವಧರ್ಮ ಸಮನ್ವಯತೆಗೆ ಟೊಂಕಕಟ್ಟಿ ದುಡಿದವರು.

## ಶಿಷ್ಯ ಸಂಪತ್ತು

ಅಚ್ಯುತದಾಸರ ಶಿಷ್ಯಸಂಪತ್ತು ಅಪಾರ-ಶಿಷ್ಯರು - ಪ್ರಶಿಷ್ಯರು ಇಂದು ರಾಷ್ಟ್ರಾದ್ಯಂತ ಪಸರಿಸಿದ್ದಾರೆ. ಲಕ್ಷ್ಮಣದಾಸ್ ವೇಲಣಕರ್, ಪೊಳಲಿ ಜಗದೀಶದಾಸರು, ಶಿರ್ಸಿನಾರಾಯಣದಾಸರು, ಈಶ್ವರ ದಾಸರು, ರಮಾನಂದ

ಸೌಬಳಕರ್, ದೇ. ಸು. ವೆಂಕಟೇಶದಾಸರು ನೀವಣೆ ಶಂಕರಭಟ್ಟ ಹೀಗೆ ಅನೇಕ ದಾಸರು ಇವರ ಮಾರ್ಗದರ್ಶನ ಪಡೆದು ಉತ್ತಮ ಕೀರ್ತನಕಾರ ರೆನಿಸಿದ್ದಾರೆ. ದಾಸರು ಅಕಾಡೆಮಿ ಸದಸ್ಯರಾಗಿದ್ದಾಗ, ಕೀರ್ತನ ಕಲಾಪರಿಷತ್ತಿನ ಮೂಲಕ ಅನೇಕ ಶಿಕ್ಷಣ ಶಿಬಿರಗಳನ್ನು ನಡೆಸಿ ಕಥಾಕೀರ್ತನರಂಗದ ಆಗುಹೋಗುಗಳ ಬಗ್ಗೆ ಬೆಳಕು ಚೆಲ್ಲಲು ಕಾರಣರಾಗಿದ್ದಾರೆ.

ಇವರಿಗೆ ಸಂದ ಪ್ರಶಸ್ತಿ ಗೌರವಗಳು ಸನ್ಮಾನ ಸಮಾರಂಭಗಳು ಎಣಿಕೆಗೂ ಮೀರಿದ್ದು. ಇವರನ್ನು ಸನ್ಮಾನಿಸಿ ಗೌರವಿಸದ ಭಾರತೀಯ ಮಠಗಳೇ ಇಲ್ಲವೆನ್ನಬಹುದು. ಅಲ್ಲದೆ ನಗರದ ಪ್ರತಿಷ್ಠಿತ ಸಂಗೀತ ಸಂಸ್ಥೆಗಳೂ ಸಹ ಇವರನ್ನು ಕರೆಸಿ ಗೌರವಿಸಿವೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗೂ ಪಾತ್ರರಾಗಿದ್ದಾರೆ.

## ಸಾತ್ವಿಕ ಜೀವಿ

ನಿಜಜೀವನದಲ್ಲಿ ಅಚ್ಯುತದಾಸರು ಸಾತ್ವಿಕ ಜೀವಿ. ಸದಾ ಹಸನ್ಮುಖಿ ಯಾರನ್ನು ನೋಯಿಸಿದವರಲ್ಲ. ಅಜಾತ ಶತ್ರು. ತಮ್ಮ ಕೀರ್ತನದ ಮೂಲಕ 'ಸದಾಚಾರ ಸಂಹಿತೆ' ಯನ್ನು ಬೋಧಿಸುವ ದಾಸರು ಅದನ್ನು ಮೊದಲು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದು ಇತರರಿಗೆ ಮಾದರಿಯಾಗಬೇಕು ಎನ್ನುವ ಪಂಥದವರು ಹಾಗೇ ನಡೆದುಕೊಂಡವರು. ಹಾಗಾಗಿ ಇವರಿಗೆ 'ಸಂತ' ಎನ್ನುವ ಸೇರ್ಪಡೆ ಅನ್ವರ್ಥ.

'ದಾಸವಾಣಿ', 'ದಾಸಜ್ಯೋತಿ' ಪ್ರಧಾನ ಸಂಪಾದಕರಾಗಿ, ದಾಸಾಶ್ರಮದ ಗೌರವಾಧ್ಯಕ್ಷರಾಗಿ, ಕರ್ನಾಟಕ ಕೀರ್ತನ ಕಲಾ ಪರಿಷತ್ತಿನ ಸ್ಥಾಪಕಾಧ್ಯಕ್ಷರಾಗಿದ್ದುದೇ ಅಲ್ಲದೆ ಕರ್ನಾಟಕ ಕೀರ್ತನ ಮಹಾವಿದ್ಯಾಲಯದ ಕುಲಪತಿಗಳಾಗಿದ್ದಾರೆ.

ಹರಿಕಥೆಯೆಂದರೆ ಅಚ್ಯುತದಾಸರು, ಅಚ್ಯುತದಾಸರೆಂದರೆ ಹರಿಕಥೆ ಎನ್ನುವಷ್ಟರ ಮಟ್ಟಿಗೆ ಅವರಲ್ಲಿ ತಮ್ಮನ್ನ ತೊಡಗಿಸಿಕೊಂಡವರು ದಾಸರು. ಅವರು ನಿಜಕ್ಕೂ ನಮ್ಮ ನಾಡಿನ ಬಹುದೊಡ್ಡ ಆಸ್ತಿ. ಇಪ್ಪತ್ತನೆ ಶತಮಾನದ 'ಅಭಿನವ ಪುರಂದರದಾಸರು' ಇಂಥವರ ಬಗ್ಗೆ ಚಿಂತನೆ ಮಾಡಿದರೆ ಸಾಕು ನಾವು ಕೃತಾರ್ಥರೆನಿಸುತ್ತೇವೆ.

"ಕಥಾಕೀರ್ತನ ಒಂದು ವಿಶಿಷ್ಟ ಕಲೆ. ಲಲಿತಕಲೆಗಳೂ ಇದರಲ್ಲಿ ಸಮ್ಮಿಲನಗೊಳ್ಳುತ್ತವೆ. ಕಥಾ ಕೀರ್ತನ ಕಲೆ ಇನ್ನೂ ಮೂಲೆ ಗುಂಪಾಗಿಲ್ಲ.

ಕೀರ್ತನಕಲೆಯಲ್ಲಿ ಪರಿಣಿತರಾದವರನ್ನು ಈ ಕಿರುಪುಸ್ತಕದಲ್ಲಿ ಶ್ರೀ ಭದ್ರಗಿರಿ ಸರ್ವೋತ್ತಮ ಪೈ ಅವರು ಪರಿಚಯಿಸಿದ್ದಾರೆ."

